# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಭಾನುವಾರ, ಜುಲೈ 07, 2024

ಸಂಪುಟ : 51 ಸಂಚಿಕೆ : 54 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com







## ಬಿಹಾರ, ಅಸ್ಸಾಂನಲ್ಲಿ ಉಲ್ಬಣಿಸಿದ ಪ್ರವಾಹ

ನವದೆಹಲಿ, ಜು. 6 - ಬಿಹಾರದ ಹಲವಾರು ನದಿಗಳು ಉಕ್ಕಿ ಹರಿಯುತ್ತಿದ್ದು ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಈಗಲೂ ಗಂಭೀರವಾಗಿದ್ದು 25 ಲಕ್ಷ ಜನ ಪ್ರವಾಹ ಪರಿಸ್ಥಿತಿ ಎದುರಿಸುತ್ತಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು (2ನೇ ಪುಟಕ್ಕೆ)

## ದೇಶೀಯ ಹಗುರ ಟ್ಯಾಂಕ್‌ನ ಪರೀಕ್ಷೆ

ನವದೆಹಲಿ, ಜು. 6 - ದೇಶಿಯವಾಗಿ ರೂಪಿಸಲಾಗಿರುವ ಜೊರಾವರ್ ಹೆಸರಿನ ಹಗುರ ಟ್ಯಾಂಕ್ ಅನ್ನು ಆರಂಭಿಕ ಪರೀಕ್ಷೆಗೆ ಒಳಪಡಿಸಲಾಗಿದೆ. ಚೀನಾದ ಜೊತೆಗಿನ ವಾಸ್ತವಿಕ ಗಡಿ ರೇಖೆಯಲ್ಲಿ ಬಳಸಲು ಈ ಟ್ಯಾಂಕ್ ಉಪಯುಕ್ತವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಡಿ.ಆರ್.ಡಿ.ಒ. ಹಾಗೂ ಎಲ್ ಅಂಡ್ ಟಿ ಡಿಫೆನ್ಸ್ (3ನೇ ಪುಟಕ್ಕೆ)

# ಭದ್ರಾ ಡ್ಯಾಂ ಗೇಟ್ ದುರಸ್ತಿ ಇಂದು ಪೂರ್ಣ

## ಭರದಿಂದ ಸಾಗಿದ ಜಲಾಶಯ ತಳಭಾಗದಲ್ಲಿರುವ ಪ್ಲೇಟ್ ದುರಸ್ತಿ ಕಾರ್ಯ



ದಾವಣಗೆರೆ, ಜು. 6- ಭದ್ರಾ ಜಲಾಶಯದ ತಳಭಾಗದಲ್ಲಿರುವ ಕ್ರೆಸ್ಟ್ ಗೇಟ್ ಮೂಲಕ ಹೊರ ಹೋಗುತ್ತಿರುವ ನೀರು ತಡೆಗಟ್ಟಲು ದುರಸ್ತಿ ಕಾರ್ಯ ಭರದಿಂದ ಸಾಗಿದ್ದು, ನಾಳೆ ಭಾನುವಾರ ಮಧ್ಯಾಹ್ನದ ವೇಳೆಗೆ ಸಂಪೂರ್ಣ ದುರಸ್ತಿಯಾಗಲಿದೆ ಎಂದು ಭದ್ರಾ ಸಿಇ ಮತ್ತು ಎಸ್ ಇ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಲಾಶಯದಿಂದ ನೀರು ಪೋಲಾಗುತ್ತಿರುವ ಕುರಿತು ಜಿಲ್ಲಾ ಉಸ್ತವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಶುಕ್ರವಾರ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಮಾತನಾಡಿ, ಕೂಡಲೇ ಕ್ರೆಸ್ಟ್ ಗೇಟ್ ದುರಸ್ತಿ ಪಡಿಸಿ ನೀರು ಪೋಲಾಗದಂತೆ ತಡೆಯಲು ಸೂಚಿಸಿದ್ದರು.

ಸಚಿವರ ನಿರ್ದೇಶನದ ಮೇರೆಗೆ ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾ ಮಂಡಳದ ಅಧ್ಯಕ್ಷ ವೈ ದ್ಯಾವಪ್ಪ ರೆಡ್ಡಿ, ನಿರ್ದೇಶಕರೂ ಆಗಿರುವ ಡಿಸಿಸಿ ಬ್ಯಾಂಕ್ ನಿರ್ದೇಶಕ ಮುದೇಗೌಡ್ರ ಗಿರೀಶ್, ನಿರ್ದೇಶಕರುಗಳಾದ ಬೆಳಲಗೆರೆ ದೇವೇಂದ್ರಪ್ಪ ಹಾಗೂ ಗೊಲ್ಲರಹಳ್ಳಿ ಹರೀಶ್ ಅವರುಗಳು ಇಂದು ಜಲಾಶಯಕ್ಕೆ ತೆರಳಿ ದುರಸ್ತಿ ಕಾರ್ಯವನ್ನು ವೀಕ್ಷಿಸಿದರು.

ಜಲಾಶಯದ ಕ್ರೆಸ್ಟ್ ಗೇಟ್ ನ ಕೆಳಭಾಗದಲ್ಲಿ ರಬ್ಬರ್ ಪ್ಯಾಕಿಂಗ್ ಹಾಳಾದ ಕಾರಣ ಜಲಾಶಯದಿಂದ ನೀರು ಹೊರ ಹೋಗುತ್ತಿತ್ತು. ಜುಲೈ 3 ರಿಂದ ಸುಮಾರು 3500 ಕ್ಯೂಸೆಕ್ಸ್ ನೀರು ಹೊರ ಹೋಗುತ್ತಿತ್ತು. ದುರಸ್ತಿ ಕಾರ್ಯ ಆರಂಭವಾದ ನಂತರ ಹೊರ ಹೋಗುತ್ತಿರುವ ನೀರಿನ ಪ್ರಮಾಣ ಶನಿವಾರ 1 ಸಾವಿರ ಕ್ಯೂಸೆಕ್ಸ್ ಗೆ ಇಳಿಕೆ ಆಗಿದೆ. ಗೇಟ್‌ಗೆ ಹೊಸ ಪ್ಲೇಟ್ ಅಳವಡಿಸಿ ವೆಲ್ಡ್ ಮಾಡಬೇಕಿದ್ದು, (3ನೇ ಪುಟಕ್ಕೆ)

# ಫೇಕ್‌ನ್ಯೂಸ್, ಡ್ರಗ್ಸ್‌ಗೆ ಕಡಿವಾಣ



### ಪೊಲೀಸರಿಗೆ ಸಿಎಂ ಸೂಚನೆ

ಬೆಂಗಳೂರು, ಜು. 6 - ಡ್ರಗ್ಸ್ ಮಾರುವರು, ರೌಡಿಗಳು ಹಾಗೂ ರಿಯಲ್ ಎಸ್ಟೇಟ್ ದಂಧೆ ನಡೆಸುವ ವರು ಯಾರು ಎಂಬುದು ಆಯಾ ಠಾಣಾಧಿಕಾರಿಗಳಿಗೆ ಗೊತ್ತಿದ್ದರೂ ಇದನ್ನು ತಡೆಯಲು ವಿಫಲರಾಗಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪೊಲೀಸ್ ಅಧಿಕಾರಿಗಳಿಗೆ ಚಾಟಿ ಬೀಸಿದ್ದಾರೆ.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ 2024ರ ಹಿರಿಯ ಪೊಲೀಸ್ ಅಧಿಕಾರಿಗಳ ಸಮಾವೇಶ ಉದ್ಘಾಟಿಸಿ, ನೂತನ ತಂತ್ರಾಂಶ ಬಿಡುಗಡೆ ಮಾಡಿ ಮಾತನಾಡಿದ ಅವರು, ನಿಮಗೆ ಗನ್‌ಗಳನ್ನು ಕೊಟ್ಟಿರುವುದು ಏತಕ್ಕೆ, ಕಿಸೆಯಲ್ಲಿ ಇಡುವುದಕ್ಕಲ್ಲ, ರೌಡಿಗಳನ್ನು ಎದುರಿಸಲಿಕ್ಕೆ ಎಂದರು.

ರೌಡಿಗಳಲ್ಲಿ ಭಯ ಹುಟ್ಟಿಸುವ ಕೆಲಸ ಮಾಡಬೇಕು, ನಿಮ್ಮನ್ನು ಕಂಡರೆ ಭಯ ಇಲ್ಲದಿದ್ದರೆ ಸಾರ್ವಜನಿಕರು ಯಾರಿಂದ ರಕ್ಷಣೆ ಪಡೆಯಬೇಕು? ಎಂದು ಪ್ರಶ್ನಿಸಿದರು.

ಕೆಲವು ಪೊಲೀಸರಿಗೆ ಇ-ಬೀಟ್ ವ್ಯವಸ್ಥೆ ಜಾರಿಯಲ್ಲಿರುವುದೇ ಗೊತ್ತಿಲ್ಲವೆಂದರೆ ನಾಚಿಕೆ ಆಗಬೇಕು, ಇದನ್ನು ಸರಿಪಡಿಸಿಕೊಳ್ಳಿ ಎಂದರು.

ಸಮಾಜದಲ್ಲಿ ಎಲ್ಲರೂ ನಿಶ್ಚಿಂತೆ ಯಿಂದ, ಭಯಮುಕ್ತವಾಗಿ ವಾಸಿಸುವ ವಾತಾವರಣ ಇರಬೇಕು, ಕಾನೂನು ಸುವ್ಯವಸ್ಥೆ ಸುರಕ್ಷಿತವಾಗಿದ್ದರೆ ಅಭಿವೃದ್ಧಿ, ಬಂಡವಾಳ ಹೂಡಿಕೆ, ಉದ್ಯೋಗ ಸೃಷ್ಟಿ ಸಾಧ್ಯ. ಇದರಿಂದ ತಲಾ ಆದಾಯ, ಜಿಡಿಪಿ ಬೆಳವಣಿಗೆಯೂ ಆಗುತ್ತದೆ ಎಂದರು.

ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದರೆ ಕೆಳಗಿನ ಅಧಿಕಾರಿಗಳು ಇನ್ನಷ್ಟು (5ನೇ ಪುಟಕ್ಕೆ)

### ಭದ್ರಾ ಜಲಾಶಯ

ಇಂದಿನ ಮಟ್ಟ : 130 ಅಡಿ 7 ಇಂಚು
ಒಳ ಹರಿವು : 7736 ಕ್ಯೂಸೆಕ್ಸ್
ಹೊರ ಹರಿವು : 352 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 138 ಅಡಿ

# ರಿಂಗ್ ರಸ್ತೆ ಕಾಮಗಾರಿ ಟೆಂಡರ್ ಶೀಘ್ರ ಅಂತಿಮಗೊಳಿಸಬೇಕು

## ದೂಡಾ ಸಾಮಾನ್ಯ ಸಭೆಯಲ್ಲಿ ಸಚಿವ ಎಸ್ಸೆಸ್ಸೆಂ ಸೂಚನೆ



ದಾವಣಗೆರೆ,ಜು. 6- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿನ ಅಖ್ತರ್ ರಜ್ಞಾ ಸರ್ಕಲ್‌ನಿಂದ ಸರ್ ಮಿರ್ಜಾ ಇಸ್ಮಾಯಿಲ್ ನಗರದ ಮೂಲಕ ಮಾಗಾನಹಳ್ಳಿ ರಸ್ತೆಗೆ ಸಂಪರ್ಕಿಸುವ 120 ಅಡಿ ರಸ್ತೆ ಕಾಮಗಾರಿಯ ಟೆಂಡರ್‌ನ್ನು 15 ದಿನಗಳಲ್ಲಿ ಅಂತಿಮಗೊಳಿಸಿ ಕೆಲಸ ಆರಂಭಿಸುವಂತೆ ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಸೂಚಿಸಿದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಇಂದು ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

120 ಅಡಿ ಅಗಲದ ರಸ್ತೆ 300 ಮೀಟರ್ ಮಾತ್ರ ನಿರ್ಮಾಣ ಬಾಕಿ ಇದ್ದು, ಇದರಿಂದ ವರ್ತುಲ ರಸ್ತೆಯಲ್ಲಿ ಬರುವ ವಾಹನಗಳಿಗೆ ತೊಂದರೆಯಾಗಿದೆ. ಈ ರಸ್ತೆ ನಿರ್ಮಾಣವಾದಲ್ಲಿ ನಗರದೊಳಗಿನ ವಾಹನ ದಟ್ಟಣೆ ಕಡಿಮೆಯಾಗಲಿದ್ದು, ಜನರಿಗೂ ಅನುಕೂಲ ವಾಗಲಿದೆ ಎಂದು ಸಚಿವರು ತಿಳಿಸಿದರು.

ಈ ವೇಳೆ ಪ್ರಾಧಿಕಾರದ ಅಧಿಕಾರಿಗಳು ತಾಂತ್ರಿಕ ಬಿಡ್ ಪರಿಶೀಲಿಸಿ ಆರ್ಥಿಕ ಬಿಡ್ ತೆರೆಯಲು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗಿದ್ದು, ಸರ್ಕಾರದ ಹಂತದಲ್ಲಿದ್ದು 15 ದಿನಗಳೊಳಗಾಗಿ ಅನುಮೋದನೆ ಪಡೆದು ಕಡಿಮೆ ಬಿಡ್ ಮಾಡಿದ ಗುತ್ತಿಗೆದಾರರಿಗೆ ಸಾಮರ್ಥ್ಯವನ್ನಾಧರಿಸಿ ಟೆಂಡರ್ ಅಂತಿಮಗೊಳಿಸಿ ಕಾಮಗಾರಿ ಪ್ರಾರಂಭಿಸಲಾಗುತ್ತದೆ ಎಂದರು.

ನಗರದ ಪ್ರಮುಖ ರಸ್ತೆ ಮಾರ್ಗಗಳಲ್ಲಿ ನಿವೇಶನಗಳು ಇರುವುದರಿಂದ ಸುಗಮ ಸಂಚಾರಕ್ಕೆ ಸಮಸ್ಯೆಯಾಗಿದ್ದು, ಅಂತಹ ಸ್ಥಳಗಳಿಗೆ ಸೂಕ್ತವಾದ ಪರಿಹಾರ ಅಥವಾ ಬದಲಿ ಸ್ವತ್ತನ್ನು ನೀಡಿ ಸ್ವಾಧೀನ (2ನೇ ಪುಟಕ್ಕೆ)

## ನೂತನ ಡಿಸಿಯಾಗಿ ಡಾ. ಗಂಗಾಧರಸ್ವಾಮಿ ಅಧಿಕಾರ ಸ್ವೀಕಾರ




ದಾವಣಗೆರೆ, ಜು.6 - ನೂತನ ಜಿಲ್ಲಾಧಿಕಾರಿ ಡಾ. ಜಿ.ಎಂ. ಗಂಗಾಧರಸ್ವಾಮಿ ಅವರು ಇಂದು ಅಧಿಕಾರ ವಹಿಸಿಕೊಂಡರು. ನಿರ್ಗಮಿತ ಜಿಲ್ಲಾಧಿಕಾರಿ ಎಂ.ವಿ. ವೆಂಕಟೇಶ್ ಅವರಿಂದ ಅಧಿಕಾರ ಸ್ವೀಕರಿಸಿದರು.

ಗಂಗಾಧರಸ್ವಾಮಿ ಅವರು 2014 ರ ತಂಡದ ಐಎಎಸ್ ಅಧಿಕಾರಿಯಾಗಿದ್ದಾರೆ. ಇದಕ್ಕೂ ಮೊದಲು ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.


॥ ಶ್ರೀ ಸಿದ್ದೇಶ್ವರ ಸ್ವಾಮಿ ಪ್ರಸನ್ನ ॥

### ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 30.11.1944

ನಿಧನ : 30.06.2024

ದಾವಣಗೆರೆ ವಿದ್ಯಾನಗರ ವಾಸಿ

ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 30.06.2024ನೇ ಭಾನುವಾರ ರಾತ್ರಿ 10.30ಕ್ಕೆ, ನನ್ನ ಪೂಜ್ಯ ಪತಿಯವರಾದ

**ಡಾ. ಎ.ಬಿ. ಪರಮೇಶ್ವರಪ್ಪನವರು**

(ನಿವೃತ್ತ ಪ್ರಾಂಶುಪಾಲರು ಎಂ.ಎಸ್.ಬಿ.ಕಾಲೇಜ್ ದಾವಣಗೆರೆ)

ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ದಿನಾಂಕ: 8.7.2024ನೇ ಸೋಮವಾರ ಬೆಳಿಗ್ಗೆ 12ಕ್ಕೆ ತರಳಬಾಳು ಸಭಾ ಭವನ (ಮಿನಿ ಚೌಲ್ಟ್ರಿ) ಹದಡಿ ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ ಶ್ರೀಮತಿ ಲಲಿತಮ್ಮ ಮತ್ತು ಮಕ್ಕಳು
ಶ್ರೀಮತಿ ಮಂಜಮ್ಮ ಶ್ರೀ ಎ.ಬಿ. ರೇವಣಸಿದ್ದಪ್ಪ ಮತ್ತು ಮಕ್ಕಳು, ಸೊಸೆಯಂದಿರು ಮತ್ತು ಮೊಮ್ಮಕ್ಕಳು ಹಾಗೂ ಹಳೇಬಾತಿ ಅಗಸನಕಟ್ಟೆ ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ :99808 22722, 96867 65150

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



### ಅಭಿನಂದನೆಗಳು



2024–25ನೇ ಸಾಲಿನ

**Rotaract Club RGICM President**

ಆಗಿ ಆಯ್ಕೆಯಾಗಿ ಅಧಿಕಾರ ಸ್ವೀಕರಿಸಿರುವ ಶ್ರೀ ಭರತ್ ಎಸ್.ಚನ್ನಗಿರಿ ಹಾಗೂ ಶ್ರೀಮತಿ ರಶ್ಮಿ ದಂಪತಿಗಳ ಪುತ್ರಿ, ಆರ್.ಜಿ.ಪದವಿ ಕಾಲೇಜಿನ ವಿದ್ಯಾರ್ಥಿನಿ

**ರೊ॥ ನೇಹ ಚನ್ನಗಿರಿಗೆ**

ಹಾರ್ದಿಕ ಅಭಿನಂದನೆಗಳು.

ಬೆಳೆಯುವ ಪೈರನ್ನು ಮೊಳಕೆಯಲ್ಲೇ ಕಾಣು ಎಂಬ ನಾಣ್ಣುಡಿಯಂತೆ ಚಿಕ್ಕ ವಯಸ್ಸಿನಲ್ಲೇ ದೊಡ್ಡ ಸಂಸ್ಥೆಯ ಅಧ್ಯಕ್ಷೆಯಾಗಿ ಆಯ್ಕೆಗೊಂಡಿದ್ದು, ಈ ಅವಧಿಯಲ್ಲಿ ಉತ್ತಮ ಸೇವಾ ಕಾರ್ಯ ನಿರ್ವಹಿಸಿ ಕುಟುಂಬಕ್ಕೆ ಹಾಗೂ ಕಾಲೇಜಿಗೆ ಕೀರ್ತಿ ತರಲೆಂದು ಶುಭ ಕೋರುತ್ತೇವೆ.

ಶುಭ ಕೋರುವವರು

- ಸಿ.ಆರ್.ಸತ್ಯನಾರಾಯಣ ಶ್ರೀಮತಿ ಸಿ.ಎಸ್.ದೇವಲೀಲಾ
- ಗೋವಿಂದರಾಜ್ ಗುಪ್ತ ಶ್ರೀಮತಿ ವಿಜಯಲಕ್ಷ್ಮಿ
- ಶ್ರೀಮತಿ ರಾಧಿಕಾ ಗೋಲಿ ಮತ್ತು ಪ್ರವೀಣ್ ಗೋಲಿ

ಸಿ.ಬಿ.ನಿಹಾಲ್ ಸಾವನ್ ಗೋಲಿ

ಸಿಬ್ಬಂದಿವರ್ಗ

♦ ರಂಗಮಹಲ್, ♦ ನ್ಯಾಷನಲ್ ಕಾನ್ಫರೆನ್ಸ್ ಹಾಲ್, ♦ ನ್ಯಾಷನಲ್ ಲಾಡ್ಜ್





# ಹರಪನಹಳ್ಳಿ: ಜಿಲ್ಲಾಡಳಿತದ ಜನಸ್ಪಂದನಕ್ಕೆ ಹರಿದು ಬಂದ ಜನಸಾಗರ

ಹರಪನಹಳ್ಳಿ,ಜು.6- ಪಟ್ಟಣದ ಬಾಬು ಜಗಜೀವನ ರಾಮ್ ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತಾಲೂಕಾಡಳಿತ ಮತ್ತು ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಜನಸ್ಪಂದನ ಕಾರ್ಯಕ್ರಮ ದಲ್ಲಿ ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಅವರು ಸಾರ್ವಜನಿಕರ ಅಹವಾಲು ಆಲಿಸಿದರು.



ಈ ಜನಸ್ಪಂದನ ಕಾರ್ಯಕ್ರಮಕ್ಕೆ ಜನಸಾಗರವೇ ಹರಿದುಬಂದಿತ್ತು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಅಹವಾಲು ಸಲ್ಲಿಸಿದ್ದು ವಿಶೇಷವಾಗಿತ್ತು. ರೈತ, ಕಾರ್ಮಿಕ, ಕೃಷಿ ಕೂಲಿಕಾರ್ಮಿಕರ ಸಂಘಟನೆಗಳ ಮುಖಂಡರೂ ಸಹ ಆಗಮಿಸಿ ಮನವಿ ಸಲ್ಲಿಸಿದರು.

ಜಿಲ್ಲಾ ಪಂಚಾಯತ್ ಸಿಇಓ ನೋಂಗ್ಜಾಯಿ ಮೊಹಮ್ಮದ್ ಅಲಿ ಅಕ್ರಮ ಶಾ, ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ ಮತ್ತು ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಸಾರ್ವಜನಿಕರ ಅಹವಾಲು ಆಲಿಸಿದರು.

ಹಳ್ಳಿಕೇರಿ, ಮಾದಿಹಳ್ಳಿ, ಗೌರಿಪುರ ತೊಗರಿಕಟ್ಟಿ, ಜಿಟ್ಟಿನಕಟ್ಟಿ, ಯರಬಾಳು, ತಾವರಗೊಂದಿ, ಅರಸನಾಳು, ಹಲುವಾಗಲು, ಗರ್ಭಗುಡಿ, ಬಿಕ್ಕಿಕಟ್ಟಿ ಗ್ರಾಮದಲ್ಲಿನ ಫಲಾನುಭವಿಗಳಿಗೆ ನಿವೇಶನ ನೀಡಬೇಕು, ನಿವೇಶನಕ್ಕೆ ಸರ್ಕಾರಿ ಜಮೀನು ಹುಡುಕಿಕೊಡಬೇಕು. ಜಾಗವಿರುವ ಕಡೆಗೆ ನಿವೇಶನ ಹಂಚಿಕೆ ಮಾಡಬೇಕು ಎಂದು ಆಯಾ ಗ್ರಾಮಸ್ಥರು ಜನಸ್ಪಂದನ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿ ಭಾಗ್ಯ, ಶೃತಿ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ಅರಸಿಕೇರೆಯಲ್ಲಿ ನಾಡಕಚೇರಿ ನಿರ್ಮಿಸಬೇಕು. ಬಸ್ ಸೌಕರ್ಯ ಕಲ್ಪಿಸಬೇಕು. ಆಸ್ಪತ್ರೆಗೆ ವೈದ್ಯಾಧಿಕಾರಿಗಳನ್ನು ನೇಮಿಸಬೇಕು. ನಿರಂತರ ಜ್ಯೋತಿ ಸಮಸ್ಯೆ ಸರಿಪಡಿಸಬೇಕು ಎಂದು ಅರಸಿಕೆರೆ ರೈತ ಮುಖಂಡರಾದ ಹೆಚ್ ಹಾಲಪ್ಪ, ಎ.ಬಿ ನಾಗರಾಜಗೌಡ ಅವರು ಗ್ರಾಮಸ್ಥರೊಂದಿಗೆ ಆಗಮಿಸಿ, ಮನವಿ ಸಲ್ಲಿಸಿದರು.

ಚಿಗಟೇರಿ ಮಹಿಳಾ ಸರ್ಕಾರಿ ಪಿಯು ಕಾಲೇಜ್ ಬಳಿ ಗಾಜಿನ ಬಾಟಲಿ ಬಿಸಾಕಿ ಹೋಗುವಷ್ಟು ಕೆಟ್ಟು ಹೋಗಿರುವ ಅವ್ಯವಸ್ಥೆಯನ್ನು ಸರಿಪಡಿಸಿ, ವಿದ್ಯಾರ್ಥಿಗಳ ಹಿತ ಕಾಪಾಡಬೇಕು ಎಂದು ಸಮಾಜಸೇವಕ ಹುಳ್ಳಿ ಕೊಟ್ರಪ್ಪ ಹಾಗೂ ಮುಖಂಡರು ಮನವಿ ಸಲ್ಲಿಸಿದರು. ಸ್ಥಳ ಪರಿಶೀಲನೆ ನಡೆಸಿ ಸರಿಪಡಿಸಲು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ತಿಳಿಸಿದರು.

ತಾವು ಹಿರಿಯ ರಂಗಭೂಮಿ ಕಲಾವಿದರಾಗಿದ್ದು, ತಮಗೆ ವಯಸ್ಸಾಗಿದ್ದು ಮನೆ ಕಟ್ಟಿಸಲು ಧನಸಹಾಯ ನೀಡಬೇಕು ಎಂದು ಇದೇ ವೇಳೆ ಹಿರಿಯ ಕಲಾವಿದ ಡಾ.ಹೆಚ್. ಷಡಕ್ಷರಪ್ಪ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

**ಹಿಂಬರಹ ಕೊಡಿ:** ಯಾವುದೇ ಅರ್ಜಿಗಳ ಬಗ್ಗೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಬಾರದು. ಕಾನೂನಿನಲ್ಲಿ ಅವಕಾಶವಿದ್ದರೆ ಕೂಡಲೇ ಅರ್ಜಿ ಪರಿಶೀಲಿಸಿ ಕ್ರಮ ವಹಿಸಬೇಕು. ಇಲ್ಲದಿದ್ದಲ್ಲಿ ವಿಳಂಬ ಮಾಡದೇ ಹಿಂಬರಹ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಸೌಜನ್ಯದಿಂದ ವರ್ತಿಸಿ:** ಸಾರ್ವಜನಿಕರು ಸಲ್ಲಿಸಿದ ಅರ್ಜಿಗಳ ಪರಿಶೀಲನೆ ವೇಳೆ ಸಮರ್ಪಕ ಮಾಹಿತಿ ನೀಡದ ಅಧಿಕಾರಿಗಳ ಕಾರ್ಯವೈಖರಿಯ ಬಗ್ಗೆ ಜಿಲ್ಲಾಧಿಕಾರಿ ಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಅಧಿಕಾರಿಗಳು ಸಾರ್ವಜನಿಕರೊಂದಿಗೆ ಸರಿಯಾಗಿ ವರ್ತಿಸಿ ಸ್ಪಂದನೆ ನೀಡಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

**ಅಚ್ಚುಕಟ್ಟಾದ ವ್ಯವಸ್ಥೆ:** ಕಾರ್ಯಕ್ರಮದ ಸ್ಥಳದಲ್ಲಿ ವಿವಿಧ ಇಲಾಖೆಗಳಿಂದ ಸಾಲಾಗಿ ಮಳಿಗೆ ಹಾಕಿ ಅರ್ಜಿ ಸ್ವೀಕಾರಕ್ಕೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿತ್ತು.

**ಮಾಹಿತಿ ಫಲಕ:** ತೋಟಗಾರಿಕೆ, ಆರೋಗ್ಯ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅರಣ್ಯ ಇಲಾಖೆಗಳ ಅಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಯೋಜನೆಗಳ ಮಾಹಿತಿ ಫಲಕಗಳನ್ನು ಅಳವಡಿಸಿ, ಕರಪತ್ರ ವಿತರಿಸಿ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಗಿರೀಶ ಬಾಬು, ತಾಪಂ ಇಓ ಚಂದ್ರಶೇಖರ್, ಡಿವೈಎಸ್ಪಿ ಮಹಾಂತೇಶ ಸಜ್ಜನ, ಪಿಎಸ್ಐ ಶಂಭುಲಿಂಗ ಹಿರೇಮಠ, ನರೇಗಾ ಸಹಾಯಕ ನಿರ್ದೇಶಕ ಸೋಮಶೇಖರ, ಸಿಡಿಪಿಓ ಜಿ. ಅವಿನಾಶ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

**ಜಿಲ್ಲಾಧಿಕಾರಿಗಳ ಸೈಕಲ್ ಸಂಚಾರ:** ಜನ ಸ್ಪಂದನ ಕಾರ್ಯಕ್ರಮಕ್ಕೆ ಮೊದಲು ಜಿಲ್ಲಾಧಿಕಾರಿಗಳು ಹರಪನಹಳ್ಳಿ ನಗರ ಸಂಚಾರ ನಡೆಸಿದರು. ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ತಹಶೀಲ್ದಾರ್ ಗಿರೀಶಬಾಬು, ಪುರಸಭೆ ಮುಖ್ಯಾಧಿಕಾರಿ ಶಿವಕುಮಾರ ಎರಗುಡೆ ಅವರೊಂದಿಗೆ ಸೈಕಲ್ ಸವಾರಿ ನಡೆಸಿದರು.

ಮಹೇಶ ಆಸ್ಪತ್ರೆಗೆ ತೆರಳಿ ಅಲ್ಲಿನ ಸ್ಕ್ಯಾನಿಂಗ್ ಯಂತ್ರ, ಚಿಕಿತ್ಸಾ ದರದ ಬಗ್ಗೆ ಪರಿಶೀಲಿಸಿದರು. ಡೆಂಘಿ ಜ್ವರ ಪರೀಕ್ಷೆಗೆ ಶುಲ್ಕ ಪಡೆಯುವಾಗ ಸರ್ಕಾರ ನಿಗದಿಪಡಿಸಿದ ನಿಯಮ ಪಾಲಿಸಲು ತಿಳಿಸಿದರು.


ತೆಗ್ಗಿನಮಠ ವೃತ್ತದಲ್ಲಿ ಚರಂಡಿ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು. ಆಯುಷ್ ಕಣ್ಣಿನ ಆಸ್ಪತ್ರೆಗೆ ತೆರಳಿದ ವೇಳೆ ಅಲ್ಲಿ ಪಡೆಯುತ್ತಿದ್ದ ಚಿಕಿತ್ಸೆಯ ದರ ಪರಿಶೀಲನೆ ನಡೆಸಿದರು.

ಸಿಪಿಐ ಕಚೇರಿಯ ಗ್ರಂಥಾಲಯ ಇಲಾಖೆಯ ಪ್ರದೇಶದ ಸುತ್ತಲು ವೀಕ್ಷಣೆ ನಡೆಸಿದರು. ಕಾರ್ ನಿಲ್ದಾಣದಲ್ಲಿ ಡ್ರೈವರ್‌ಗಳ ಮನವಿ ಸ್ವೀಕರಿಸಿದರು. ಬಳಿಕ ಬಸ್ ನಿಲ್ದಾಣದ ಸುತ್ತಲು ಸಂಚರಿಸಿ ಸುತ್ತಲಿನ ಪರಿಸರ ಪರಿಶೀಲಿಸಿದರು. ಬಸ್ ನಿಲ್ದಾಣದ ಹತ್ತಿರದಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ತರಕಾರಿ ಮಾರುಕಟ್ಟೆಯ ವೀಕ್ಷಣೆ ನಡೆಸಿದರು.

ಜ್ಯೂನಿಯರ್ ಕಾಲೇಜ್ ಬಳಿಯ ಕನಕ ವೃತ್ತಕ್ಕೆ ಆಗಮಿಸಿ ಅಲ್ಲಿನ ಚರಂಡಿ ವ್ಯವಸ್ಥೆಯ ಬಗ್ಗೆ ಪರಿಶೀಲಿಸಿದರು. ಅಲ್ಲಿಂದ ಗುಡೇಕಟ್ಟೆ ಸರ್ಕಲ್ ಹಾಗೂ ಐಬಿ ಸರ್ಕಲ್‌ನಲ್ಲಿ ಸಂಚರಿಸಿ ಬಳಿಕ ಕಾರ್ಯಕ್ರಮದ ಸ್ಥಳಕ್ಕೆ ಆಗಮಿಸಿದರು.

## ಪದವಾಣಿ-107

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**

1) ಕೆಟ್ಟ ಅಭ್ಯಾಸ 3
3) ಅವರೋಹ-ವಿರುದ್ಧ ಪದ 3
5) ದಿವಾನ ಕುಳಿತ ಮೊಗಸಾಲೆ 5
6) ರಣಕಹಳೆ 4
8) ಆಂಧ್ರ ಪ್ರದೇಶದಿಂದ ಪ್ರತ್ಯೇಕವಾದ ರಾಜ್ಯ 4
9) ತಿಳಿಗುಲಾಬಿ ಬಣ್ಣ 4
10) ಗೆಳೆಯರ ಸ್ನೇಹ 4
12) ಶ್ರೀಮಂತಿಕೆ ಹೀಗೆ ಬಂದಿದೆ 5
14) ಸವಾರ-ಪರ್ಯಾಯ ಪದ 3
15) ಶೀತದಿಂದ ಉಂಟಾಗುವ ಬಾಧೆ 3

**ಮೇಲಿನಿಂದ ಕೆಳಕ್ಕೆ :**

1) ಹಾರ ತೊಟ್ಟು ಮಾಡಿದ ವ್ಯಾಪಾರ 4
2) ದೊಡ್ಡ ಹೊಳೆ 2
3) ಅಂಬಾರಿ ಹೊರುವ ಪ್ರಾಣಿ 2
4) ಹಣಕ್ಕಾಗಿ ನಡೆದ ಪ್ರಸಂಗ 4
7) ಕುದುರೆಯನ್ನು ಏರುವ ಬಳೆ 3
8) ಸರ್ಕಾರಕ್ಕೆ ಕಟ್ಟುವ ಕಂದಾಯ 3
9) ಬರುವಿಕೆ ಕೆಳಗಿನಿಂದ ಮೇಲೆ 4
11) ದೇಹದೊಳಗಿನ ತಂತು ಹಾಗೂ ಧಮನಿ ಒಟ್ಟಾಗಿವೆ 4
12) ಮಧುರವಾದ ರುಚಿ 2
13) ಕೆನ್ನೆಯಲ್ಲ, ಹಾಲಿನ ಸಾರವತ್ತಾದ ಭಾಗ 2

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 106 ರ ಉತ್ತರಗಳು :**

ಎಡದಿಂದ ಬಲಕ್ಕೆ : 1) ಅಧ್ವಾನ 3) ತಪನ 5) ಕನಅ (ಆನಕ) 7) ಔರಸ 9) ಯುಗಪುರುಷ 10) ಭವಿಷ್ಯ 11) ಧನಿಯ 12) ಬಕರ 14) ವರ್ತಕ.
ಮೇಲಿನಿಂದ ಕೆಳಕ್ಕೆ : 1) ಅನಂತ 2) ನವೀನ 4) ಪಠ್ಯಪುಸ್ತಕ 5) ಕರಭ 6) ಆಯುಷ್ಯ 7) ಔಷಧ 8) ಸಮಯ 12) ಬಸವ 13) ರಕ್ಷಕ.

# ಟೆಂಡರ್ ಶೀಘ್ರ ಅಂತಿಮಗೊಳಿಸಬೇಕು



**(1ನೇ ಪುಟದಿಂದ)** ಮಾಡಿಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಅಭಿವೃದ್ದಿ ಮಾಡಲು ಸಭೆ ಅನುಮೋದನೆ ನೀಡಿತು.

**ಪಿತ್ರಾರ್ಜಿತ ಸ್ವತ್ತುಗಳಿಗೆ ವಿಳಂಬವಿಲ್ಲದೆ ಅನುಮೋದನೆ ನೀಡಿ :** ಕುಟುಂಬದ ಆಸ್ತಿಯಲ್ಲಿ ಪಾಲುದಾರಿಕೆಯಡಿ ಚಿಕ್ಕ ಚಿಕ್ಕ 10-5 ಗುಂಟೆಗಳಲ್ಲಿ ನಿವೇಶನ ವಿಂಗಡನೆ ಮಾಡಿಕೊಳ್ಳುವವರಿಗೆ ಅನಾವಶ್ಯಕವಾಗಿ ತೊಂದರೆಯಾಗದಂತೆ ನಿಯಮಬದ್ದವಾಗಿ ಶೀಘ್ರವಾಗಿ ಅನುಮತಿ ನೀಡಲು ಪ್ರಾಧಿಕಾರದ ಅಧಿಕಾರಿಗಳಿಗೆ ತಿಳಿಸಿದರು.

ಪ್ರಾಧಿಕಾರದಲ್ಲಿನ ಉಳಿತಾಯದ ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಠೇವಣಿಯನ್ನಾಗಿಡಲು ಹೆಚ್ಚು ಬಡ್ಡಿ ನೀಡುವ ಬ್ಯಾಂಕ್‌ಗಳಲ್ಲಿ ಹಣವಿರಿಸಲು ಟೆಂಡರ್ ಮೂಲಕ ಅಂತಿಮಗೊಳಿಸಲು ಸಭೆಯು ಅನುಮೋದನೆ ನೀಡಿತು.

ಸಭೆಯಲ್ಲಿ ಶಾಸಕರುಗಳಾದ ಕೆ.ಎಸ್.ಬಸವಂತಪ್ಪ, ಬಿ.ಪಿ.ಹರೀಶ್, ವಿಧಾನ ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್, ಜಿಲ್ಲಾಧಿಕಾರಿ ಹಾಗೂ ಪ್ರಾಧಿಕಾರದ ಅಧ್ಯಕ್ಷ ಡಾ. ವೆಂಕಟೇಶ್ ಎಂ.ವಿ, ಹೆಚ್ಚುವರಿ ರಕ್ಷಣಾಧಿಕಾರಿ ವಿಜಯಕುಮಾರ್ ಎಂ.ಸಂತೋಷ್, ಪ್ರಾಧಿಕಾರದ ಆಯುಕ್ತ ಹುಲ್ಮನಿ ತಿಮ್ಮಣ್ಣ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ದಾನ - ಧರ್ಮ ಮತ್ತು ನಾಯಕತ್ವದ ಗುಣ ಬೆಳೆಸುವ ಲಯನ್ಸ್ ಸೇವೆಗೆ ಎಸ್ಸೆಸ್ ಶ್ಲ್ಯಾಘನೆ

**(6ನೇ ಪುಟದಿಂದ)** ಮಾಜಿ ರಾಜ್ಯಪಾಲ ಡಾ. ಬಿ. ಎಸ್. ನಾಗಪ್ರಕಾಶ್ ಅವರು ನೂತನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು.

ದಾವಣಗೆರೆ ಲಯನ್ಸ್ ಕ್ಲಬ್ ನಿಕಟಪೂರ್ವ ಅಧ್ಯಕ್ಷ ನೀಲಿ ಉಮೇಶ್, ಲಯನ್ಸ್ ಪ್ರಾಂತೀಯ ಅಧ್ಯಕ್ಷ ವೈ.ಬಿ.ಸತೀಶ್, ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲರುಗಳಾದ ಡಾ. ಜಿ. ಶಿವಲಿಂಗಪ್ಪ, ಹೆಚ್. ಎನ್. ಶಿವಕುಮಾರ್ ಅವರುಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ದಾವಣಗೆರೆ ಲಯನ್ಸ್ ಪ್ರಥಮ ಮಹಿಳೆ ಶ್ರೀಮತಿ ಸುನಂದ ಉಳುವಯ್ಯ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಬಡ ಮಕ್ಕಳಿಗೆ ನೋಟ್ ಪುಸ್ತಕಗಳನ್ನು ವಿತರಿಸಲಾಯಿತು.

ಲಯನ್ಸ್ ಕಾರ್ಯದರ್ಶಿ ಸಿ.ಅಜಯ ನಾರಾಯಣ, ಖಜಾಂಚಿ ಎಸ್. ನಾಗರಾಜ್, ಸಹ ಕಾರ್ಯದರ್ಶಿ ಹೆಚ್.ಎಂ. ನಾಗರಾಜ್, ನಿಕಟಪೂರ್ವ ಕಾರ್ಯದರ್ಶಿ ಭೀಮಾನಂದ ಶೆಟ್ಟಿ, ನಿಕಟಪೂರ್ವ ಖಜಾಂಚಿ ಕೆ.ಟಿ. ಮಹಾಲಿಂಗಪ್ಪ, ನಿಕಟಪೂರ್ವ ಸಹ ಕಾರ್ಯದರ್ಶಿ ಎಂ.ಎನ್. ಅಮಿತ್ ಮತ್ತಿತರರು ಕಾರ್ಯಕ್ರಮದ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಲಯನ್ಸ್ ಪ್ರಾಂತೀಯ ಮಾಜಿ ಅಧ್ಯಕ್ಷ ಹೆಚ್.ವಿ. ಮಂಜುನಾಥ ಸ್ವಾಮಿ ಕಾರ್ಯಕ್ರಮ ನಿರೂಪಿಸಿದರು.

# ಎಸ್.ಎಂ. ಕೃಷ್ಣ ಆರೋಗ್ಯದಲ್ಲಿ ಸುಧಾರಣೆ

ಬೆಂಗಳೂರು, ಜು. 6 - ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಅವರ ಆರೋಗ್ಯದಲ್ಲಿ ಬಹಳಷ್ಟು ಸುಧಾರಣೆ ಕಂಡಿದೆ. ಕಳೆದ ಕೆಲವು ತಿಂಗಳಿಂದ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಅವರು, ಈಗ ಪೂರ್ಣ ಗುಣಮುಖರಾಗಿದ್ದು, ಕೆಲವೇ ದಿನಗಳಲ್ಲಿ ಮನೆಗೆ ಹಿಂತಿರುಗಲಿದ್ದಾರೆ.



ಅವರಲ್ಲಿನ ನಿಶ್ಯಕ್ತಿ ಸುಧಾರಣೆ ಆಗಬೇಕಿರುವುದರಿಂದ ಇನ್ನೂ ಕೆಲವು ದಿನಗಳ ಮಟ್ಟಿಗೆ ಆಸ್ಪತ್ರೆಯಲ್ಲೇ ವಿಶ್ರಾಂತಿ ಪಡೆಯಲಿದ್ದಾರೆ. ಉಸಿರಾಟದ ತೊಂದರೆಯಿಂದ ಸುಮಾರು ಎರಡು ತಿಂಗಳ ಕಾಲ ಐಸಿಯುನಲ್ಲಿ ತಜ್ಞ ವೈದ್ಯರು ಚಿಕಿತ್ಸೆ ನೀಡಿದ್ದರು.

# ಪಾಕ್ ರಾಯಭಾರಿ ಅಡುಗೆ ಕೆಲಸದವನ ವಿರುದ್ಧ ಲೈಂಗಿಕ ಹಲ್ಲೆ ಪ್ರಕರಣ

ನವದೆಹಲಿ, ಜು.6 - ಪಾಕಿಸ್ತಾನದ ರಾಯಭಾರಿಯ ಅಧಿಕೃತ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಮನೆ ಕೆಲಸದ ಮಹಿಳೆ ಮೇಲೆ ಲೈಂಗಿಕ ಹಲ್ಲೆ ನಡೆಸಲು ಪ್ರಯತ್ನ ನಡೆಸಿದ ಆರೋಪದ ಮೇಲೆ ಅಡುಗೆ ಕೆಲಸದವನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತೀಯ ಮಹಿಳೆ ನೀಡಿದ ದೂರನ್ನು ಆಧರಿಸಿ ಮಿನ್ಹಾಜ್ ಹುಸೇನ್ ಎಂಬ ವ್ಯಕ್ತಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಕೆಲ ತಿಂಗಳ ಹಿಂದೆ ಮಹಿಳೆ ರಾಯಭಾರಿ ಮನೆ ಕೆಲಸಕ್ಕೆ ಸೇರಿಸಿಕೊಂಡಿದ್ದರು. ಭಾರತೀಯರಾದ ಈ ಮಹಿಳೆ ರಾಯಭಾರಿ ನಿವಾಸದ ಕ್ವಾರ್ಟರ್ಸ್ ನಲ್ಲಿ ನೆಲೆಸಿದ್ದರು. ಹುಸೇನ್ ಕಳೆದ ಫೆಬ್ರುವರಿಯಲ್ಲಿ ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದ. ಆತನನ್ನು ಪಾಕಿಸ್ತಾನಕ್ಕೆ ವಾಪಸ್ ಕಳಿಸಲಾಗಿದೆ ಎಂದು ತಿಳಿಸಲಾಗಿದೆ. ಈ ಬಗ್ಗೆ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

# ಮಲೇಬೆನ್ನೂರಿಗೆ ಇಂದು ರಥಯಾತ್ರೆ

ಸುವರ್ಣ ಕರ್ನಾಟಕ ಸಂಭ್ರಮದ ರಥಯಾತ್ರೆಯು ಇಂದು ಬೆಳಗ್ಗೆ 9 ಗಂಟೆಗೆ ಹೊನ್ನಾಳಿ ತಾಲ್ಲೂಕಿಗೆ ತೆರಳುತ್ತಿದ್ದು, ಈ ವೇಳೆ ಮಲೇಬೆನ್ನೂರು ಪಟ್ಟಣದ ಸರ್ಕಲ್‌ನಲ್ಲಿ ರಥಯಾತ್ರೆಯನ್ನು ಸ್ವಾಗತಿಸಿದ ನಂತರ ಹೊನ್ನಾಳಿ ತಾಲ್ಲೂಕಿಗೆ ಬೀಳ್ಕೊಡಲಾಗುವುದು ಎಂದು ಮಲೇಬೆನ್ನೂರು ಹೋಬಳಿ ಕಸಾಪ ಅಧ್ಯಕ್ಷ ದಂಡಿ ತಿಪ್ಪೇಸ್ವಾಮಿ, ಜಿಲ್ಲಾ ಕಸಾಪ ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್ ತಿಳಿಸಿದ್ದಾರೆ.

## ಶ್ರೀಮತಿ ಪಾರ್ವತಮ್ಮ ನಿಧನ



ದಾವಣಗೆರೆ ಕುವೆಂಪು ನಗರ ವಾಸಿ ತ್ಯಾವಣಗಿ ದಿ. ಶ್ರೀ ಟಿ.ಎಸ್. ಚಾಮರಾಜ್ ಇವರ ಧರ್ಮಪತ್ನಿ **ಶ್ರೀಮತಿ ಎಸ್. ಪಾರ್ವತಮ್ಮ (80)** ಅವರು ದಿನಾಂಕ 6.7.2024ರ ಶನಿವಾರ ಸಂಜೆ 6.35ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಓರ್ವ ಪುತ್ರ, ಐವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.7.2024ರ ಭಾನುವಾರ ಮಧ್ಯಾಹ್ನ 2.30ಕ್ಕೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತರು : ಮಕ್ಕಳು, ಅಳಿಯಂದಿರು, ಬಂಧು-ಮಿತ್ರರು**
**ಮೊ : 94487 27271, 78926 32856**

## ದೊಗ್ಗನಾಳು ಗ್ರಾಮದ ಎ.ಕೆ. ಹನುಮಂತಪ್ಪ ನಿಧನ



ದಾವಣಗೆರೆ ದೇವರಾಜ ಅರಸು ಬಡಾವಣೆ ವಾಸಿ, ಹೊಳಲ್ಕೆರೆ ತಾಲ್ಲೂಕು ದೊಗ್ಗನಾಳು ಗ್ರಾಮದ ನಿವೃತ್ತ ದೂರವಾಣಿ ಅಧಿಕಾರಿಯಾದ **ಶ್ರೀ ಎ.ಕೆ. ಹನುಮಂತಪ್ಪ** ಅವರು ದಿನಾಂಕ 06-07-2024ರ ಶನಿವಾರ ರಾತ್ರಿ 9 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 86 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ.

ಮೃತರ ಪಾರ್ಥಿವ ಶರೀರವನ್ನು ದಿನಾಂಕ 07-07-2024ರ ಭಾನುವಾರ ಬೆಳಿಗ್ಗೆ 9 ಗಂಟೆಯವರೆಗೆ ದಾವಣಗೆರೆ ದೇವರಾಜ ಅರಸು ಬಡಾವಣೆಯಲ್ಲಿ ಅವರ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇರಿಸಲಾಗುವುದು. ನಂತರ ಮಧ್ಯಾಹ್ನ 2 ಗಂಟೆಗೆ ಹೊಳಲ್ಕೆರೆ ತಾಲ್ಲೂಕು ದೊಗ್ಗನಾಳು ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು : ಮಕ್ಕಳು, ಅಳಿಯಂದಿರು, ಸಹೋದರ, ಸಹೋದರಿಯರು, ಮೊಮ್ಮಕ್ಕಳು. ಮೊ. : 97430 58619

# ಬಿಹಾರ, ಅಸ್ಸಾಂನಲ್ಲಿ ಉಲ್ಬಣಿಸಿದ ಪ್ರವಾಹ

**(1ನೇ ಪುಟದಿಂದ)** ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಜೊತೆ ಮಾತನಾಡಿ ಪರಿಸ್ಥಿತಿಯ ವಿವರ ಪಡೆದಿದ್ದಾರೆ. ರಾಷ್ಟ್ರೀಯ ವಿಕೋಪ ಸ್ಪಂದನ ದಳ ಹಾಗೂ ರಾಜ್ಯ ವಿಕೋಪ ಸ್ಪಂದನ ದಳಗಳು ಸಮರೋಪಾದಿಯಲ್ಲಿ ನೆರವು ಕಾರ್ಯಾಚರಣೆ ನಡೆಸಿವೆ.

ಅಸ್ಸಾಂನ 30 ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಪ್ರಮುಖ ನದಿಗಳು ಅಪಾಯ ಮಟ್ಟ ಮೀರಿ ಹರಿಯುತ್ತಿವೆ. ಈ ವರ್ಷ ಪ್ರವಾಹದಲ್ಲಿ 52 ಜನರು ಸಾವನ್ನಪ್ಪಿದ್ದಾರೆ.


ಕಾಜಿರಂಗ ರಾಷ್ಟ್ರೀಯ ಉದ್ಯಾನದಲ್ಲಿ 114 ವನ್ಯಜೀವಿಗಳು ಸಾವನ್ನಪ್ಪಿವೆ ಹಾಗೂ 95 ಜೀವಿಗಳನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬಿಹಾರದಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಹಲವಾರು ಜಿಲ್ಲೆಗಳು ಪ್ರವಾಹ ಪೀಡಿತವಾಗಿವೆ. ಪೂರ್ವ ಹಾಗೂ ಪಶ್ಚಿಮ ಚಂಪಾರಣ್ ಜಿಲ್ಲೆಗಳಲ್ಲಿನ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ಇಲ್ಲಿರುವ ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನಿಸಲಾಗಿದೆ.

ಇದರ ಜೊತೆಗೆ ನೇಪಾಳದಲ್ಲಿ ಮಳೆ ಧಾರಾಕಾರವಾಗಿ ಸುರಿಯುತ್ತಿರುವ ಕಾರಣ ಅಲ್ಲಿಂದ ಹರಿಯುವ ನದಿಗಳಿಂದಲೂ ಅಪಾಯ ಎದುರಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾರೀ ಮಳೆಗೆ ಸಿಲುಕಿ ಉತ್ತರ ಪ್ರದೇಶದಲ್ಲಿ 14 ಜನ ಸಾವನ್ನಪ್ಪಿದ್ದಾರೆ. ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶಗಳಲ್ಲೂ ಧಾರಾಕಾರ ಮಳೆ ಸುರಿಯುತ್ತಿದೆ.

|| ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾ. ಆಲೂರು ಗ್ರಾಮದ ವಾಸಿ **ಆಲೂರು ಕಾಶೀಪುರದ ಶ್ರೀಮತಿ ಲೋಕಮ್ಮ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.** ದಿನಾಂಕ : 26.6.2024ನೇ ಬುಧವಾರ ಬೆಳಿಗ್ಗೆ 6.50ಕ್ಕೆ ನನ್ನ ಪೂಜ್ಯ ಪತಿಯವರಾದ **ಆಲೂರು ಕಾಶೀಪುರದ ಶ್ರೀ ಕೆ.ಎಸ್. ಬಸವರಾಜಪ್ಪ**

ಇವರು ಶಿವಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ 'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ : 08.07.2024ನೇ ಸೋಮವಾರ ಬೆಳಿಗ್ಗೆ 10.30ಕ್ಕೆ ಆಲೂರು ಗ್ರಾಮದ ಮೃತರ ಸ್ವಗೃಹದಲ್ಲಿ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಮೃತರ ಧರ್ಮಪತ್ನಿ : **ಆಲೂರು ಕಾಶೀಪುರದ ಶ್ರೀಮತಿ ಲೋಕಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಆಲೂರು ಕುರ್ಕಿ ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ : 79755 95414, 99722 99123**

ವಿ.ಸೂ. : ಆತ್ಮೀಯರೇ ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

|| ಶ್ರೀ ರಾಯಚೋಟಿ ವೀರಭದ್ರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 02.6.1974, ನಿಧನ : 30.06.2024

ದಾವಣಗೆರೆ ಸಿಟಿ ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ, ಇಂಡೋರ್ ಸ್ಟೇಡಿಯಂ ಹತ್ತಿರದ ವಾಸಿ **ಶ್ರೀಮತಿ ಗಿರಿಜಮ್ಮ, ಶ್ರೀ ಆರ್.ವಿ. ಬಕ್ಕೇಶಪ್ಪ ಅಡಕಿ ಇವರು ಮಾಡುವ ವಿಜ್ಞಾಪನೆಗಳು.** ದಿನಾಂಕ : 30.06.2024ನೇ ಭಾನುವಾರ ಬೆಳಿಗ್ಗೆ 7.45ಕ್ಕೆ ನಮ್ಮ ಮಗನಾದ **ಶ್ರೀ ಆರ್.ಬಿ. ಶರಣ್‌ಕುಮಾರ**


ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು** ದಿನಾಂಕ: 8.7.2024ನೇ ಸೋಮವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್, ರಾಘವೇಂದ್ರ ನರ್ಸಿಂಗ್ ಕಾಲೇಜ್ ಹತ್ತಿರ ಇರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು : ಶ್ರೀಮತಿ ಗಿರಿಜಮ್ಮ, ಶ್ರೀ ಆರ್.ವಿ. ಬಕ್ಕೇಶಪ್ಪ ಅಡಕಿ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ : 92421 34313, 99640 62223**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

|| ಶ್ರೀ ಹರಿಹರೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 03.10.1945, ನಿಧನ : 04.07.2024

ದಾವಣಗೆರೆ ಸಿಟಿ ವಾಸಿ **ಶ್ರೀಮತಿ ಕೆ.ಆರ್. ಇಂದಿರಾ ಮತ್ತು ಮಕ್ಕಳು ಇವರು ಮಾಡುವ ವಿಜ್ಞಾಪನೆಗಳು.** ದಿನಾಂಕ : 4.07.2024ನೇ ಗುರುವಾರ ಬೆಳಿಗ್ಗೆ 5.02ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀ ಜಿ.ಎಸ್. ನಾಗರಾಜ್** (ನಿವೃತ್ತ ಎಕ್ಸಿಕ್ಯೂಟಿವ್ ಇಂಜಿನಿಯರ್) ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ: 8.7.2024ನೇ ಸೋಮವಾರ ಬೆಳಿಗ್ಗೆ 10.30ರಿಂದ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀಮತಿ ಕೆ.ಆರ್. ಇಂದಿರಾ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆ, ಚಿತ್ರಹಳ್ಳಿ ಗೌಡ್ರು ವಂಶಸ್ಥರು, ಕರಿಯಪ್ಪ ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ : 99454 95000**

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

## ಬಾಡದ ಓಬೇನಹಳ್ಳಿ ಸುಭದ್ರಮ್ಮ ನಿಧನ



ದಾವಣಗೆರೆ ತಾಲ್ಲೂಕು ಬಾಡ ಗ್ರಾಮದ ವಾಸಿ ಓಬೇನಹಳ್ಳಿ ದಿ. ಬಿ.ಎಂ. ಈಶ್ವರಪ್ಪ ಇವರ ಧರ್ಮಪತ್ನಿ **ಶ್ರೀಮತಿ ಸುಭದ್ರಮ್ಮ** ಅವರು ದಿನಾಂಕ 6-7-2024ರ ಶನಿವಾರ ಸಂಜೆ 6.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 78 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಓರ್ವ ಪುತ್ರಿ, ಇಬ್ಬರು ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 7.7.2024ರ ಭಾನುವಾರ ಮಧ್ಯಾಹ್ನ 12.30ಕ್ಕೆ ಸ್ವಗ್ರಾಮ ಬಾಡದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಓಬೇನಹಳ್ಳಿ ವಂಶಸ್ಥರು, ಬಾಡ**
**ಮೊ : 99017 70726, 94491 17766**

# ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ



ದಾವಣಗೆರೆ, ಜು. 6- ಕ್ಷತ್ರಿಯ ಮರಾಠ ವಿದ್ಯಾ ಮತ್ತು ಕಲ್ಯಾಣಾಭಿವೃದ್ಧಿ ಟ್ರಸ್ಟ್ ವತಿಯಿಂದ 2023-24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ. 75 ಕ್ಕೂ ಹೆಚ್ಚು ಅಂಕಗಳನ್ನು ಗಳಿಸಿ ಉತ್ತೀರ್ಣರಾದ ದಾವಣಗೆರೆ ನಗರ ವ್ಯಾಪ್ತಿಯಲ್ಲಿರುವ ಕ್ಷತ್ರಿಯ ಮರಾಠ ಸಮಾಜದ ಬಡ ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ತಿಳಿಸಿದ್ದಾರೆ.


ಅರ್ಹ ವಿದ್ಯಾರ್ಥಿನಿಯರು ಇಂದಿನಿಂದ ಬರುವ ಜುಲೈ 5ರವರೆಗೆ ಟ್ರಸ್ಟ್ ಅಧ್ಯಕ್ಷ ಯಶವಂತರಾವ್ ಜಾಧವ್ ಅವರ ಕಚೇರಿ, ಮಂಡಿಪೇಟೆಯ ರೇಣು ಪೇಂಟ್ಸ್, ಗಡಿಯಾರ ಕಂಬದ ಹತ್ತಿರ ಇರುವ ಊರ್ವಶಿ ಗಾರ್ಮೆಂಟ್ಸ್, ದೇವರಾಜ ಅರಸು ಬಡಾವಣೆಯ ಸಾವಂತ್ ಕಾಂಪ್ಲೆಕ್ಸ್ ಇಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಇದೇ ದಿನಾಂಕ 10 ರ ಸಂಜೆ 5.30ರೊಳಗೆ ಸಂಘದ ಕಚೇರಿಗೆ ತಲುಪಿಸಬೇಕು.

ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು 94480 05060, 94485 89102, 94497 41211, 93425 14779.

# ನಗರದಲ್ಲಿ ಇಂದು ಹೋಮ

ಎಂಸಿಸಿ 'ಬಿ' ಬ್ಲಾಕ್‌ನ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದಲ್ಲಿ ಇಂದು ಮಹಾಸುದರ್ಶನ ಹೋಮ ನಡೆಯಲಿದೆ. ಬೆಳಿಗ್ಗೆ 9ಕ್ಕೆ ಪ್ರಾರಂಭವಾಗಿ ಪೂರ್ಣಾಹುತಿ ಮಧ್ಯಾಹ್ನ 1ಕ್ಕೆ ಮುಕ್ತಾಯಗೊಳ್ಳಲಿದೆ ಎಂದು ಪ್ರಧಾನ ಟ್ರಸ್ಟಿ ಎಂ. ಎನ್ ರಾಮ್ ಮೋಹನ್ ತಿಳಿಸಿದ್ದಾರೆ.

## ಚಿರಸ್ಮರಣೆ



**ಮಹಾದೇವಪ್ಪ** (ನೀರಾವರಿ ಇಲಾಖೆ)

ನೀವು ನಮ್ಮನ್ನಗಲಿ ಇಂದಿಗೆ 24 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ ಮಕ್ಕಳಾದ **ಟಿ.ಎಂ. ಕುಬೇರಪ್ಪ ಟಿ. ಈರಪ್ಪ ಮತ್ತು ಟಿ.ಎಂ. ಬಸವರಾಜ ಹಾಗೂ ಮೊಮ್ಮಕ್ಕಳು ಮತ್ತು ಬಂಧುಗಳು ಹಳ್ಳಿಹಾಳ್.**

# ಕಾಲ್ತುಳಿತ ಪ್ರಕರಣ : ಪ್ರಮುಖ ಆರೋಪಿಯ ಬಂಧನ

ನೋಯ್ಡಾ, ಜು. 7 - ಉತ್ತರ ಪ್ರದೇಶದ ಹತ್ರಾಸ್‌ನಲ್ಲಿ ನಡೆದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ದೇವಪ್ರಕಾಶ್ ಮಧುಕರ್ ಬಂದಿಸಲಾಗಿದೆ.

ಬಂಧಿತನನ್ನು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದ್ದು 14 ದಿನಗಳ ನ್ಯಾಯಾಂಗ ಕಸ್ಟಡಿಗೆ ವಹಿಸಲಾಗಿದೆ.

ಪ್ರಕರಣದ ಇನ್ನೋರ್ವ ಆರೋಪಿ ಸಂಜು ಯಾದವ್ ಬಂಧಿಸಲಾಗಿದೆ. ಬಂಧಿತನನ್ನು ಇದೇ ಅವಧಿಗೆ ಜೈಲಿಗೆ ಕಳಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದೆಹಲಿಯಲ್ಲಿ ಶುಕ್ರವಾರ ರಾತ್ರಿ ಮಧುಕರ್ ಬಂಧಿಸಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ. ಪೊಲೀಸರು ದಾಖಲಿಸಿರುವ ಎಫ್.ಐ.ಆರ್.ನಲ್ಲಿ ಮಧುಕರ್ ಹೆಸರು ಮಾತ್ರ ಇದೆ. ಭೋಲೆ ಬಾಬಾ ಎಂದೇ ಹೆಸರಾಗಿರುವ ಸೂರಜ್‌ಪಾಲ್ ನಡೆಸಿದ ಸತ್ಸಂಗದ ವೇಳೆ ಕಾಲ್ತುಳಿತ ಉಂಟಾಗಿ 121 ಜನ ಸಾವನ್ನಪ್ಪಿದ್ದರು.




**ದಿನಾಂಕ : 07.07.2024 ರಿಂದ 13.07.2024ರ ವರೆಗೆ**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಇಷ್ಟುದಿನ ಕೆಲಸ ಕಾರ್ಯಗಳ ನೆಪದಲ್ಲಿ ವೈಯಕ್ತಿಕ ಆರೋಗ್ಯವನ್ನು ಅಲಕ್ಷಿಸಿದ್ದ ನೀವು ಈಗ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸುವಿರಿ, ಆದಾಯವು ಅಗತ್ಯಕ್ಕೆ ತಕ್ಕಂತೆ ಇರುವುದರಿಂದ ವ್ಯವಹಾರಕ್ಕೇನೂ ತೊಂದರೆಯಿಲ್ಲ, ಕೆಲವೊಮ್ಮೆ ಕೆಲವರೊಂದಿಗೆ ವ್ಯವಹರಿಸುವಾಗ ಬಹಳ ಎಚ್ಚರದಿಂದಿರುವುದು ಮೇಲು, ಅತಿಯಾದ ಭೋಜನ ಕೂಟಗಳಿಂದ ದೂರ ಉಳಿಯುವುದು ಮೇಲು. ಭೂ ವ್ಯವಹಾರದಲ್ಲಿ ಹೆಚ್ಚಲ್ಲದಿದ್ದರೂ ಸಾಧಾರಣ ಪ್ರಮಾಣದಲ್ಲಿ ಲಾಭವಾಗಲಿದೆ. ಗೆಳೆಯರು ಕೊಡುವ ಸಲಹೆಗಳು ಮಾನ್ಯವಾಗಿರುತ್ತವೆ. ಭಾನು-ಮಂಗಳ-ಶುಕ್ರ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಈ ಹಿಂದೆ ನೀವು ಮಾರಾಟ ಮಾಡಿದ್ದ ಸೊತ್ತಿನ ದಾಖಲೆ ವಿಚಾರದಲ್ಲಿ ಈಗ ತಕರಾರು ಬರಲಿದೆ, ಸರ್ಕಾರಿ ನೌಕರರಿಗೆ ಬರಬೇಕಾಗಿರುವ ಮುಂಬಡ್ತಿ ಹಾಗೂ ವೇತನ ಇಷ್ಟರಲ್ಲೇ ಬರಲಿದೆ, ಜೊತೆಗೆ ವರ್ಗಾವಣೆ ಆದೇಶ ಪತ್ರವು ಕೈಸೇರಲಿದೆ, ವಿದ್ಯಾರ್ಥಿಗಳ ಶ್ರಮಕ್ಕೆ ತಕ್ಕ ಫಲಿತಾಂಶ ಬರಲಿದೆ, ಅನಾವಶ್ಯಕವಾಗಿ ತಿರುಗಾಡಲು ಹೋಗಬೇಡಿ, ಹಿರಿಯರಿಂದ ಸಿಗಲಿರುವ ಧನ ಸಹಾಯವನ್ನು ಸದುಪಯೋಗ ಪಡಿಸಿಕೊಳ್ಳಿ. ಮಡದಿಯ ಆರೋಗ್ಯದಲ್ಲಿ ಸಾಕಷ್ಟು ಚೇತರಿಕೆ ಕಾಣಲಿದೆ, ಆದಾಯದ ಮೂಲವನ್ನು ಹೆಚ್ಚಿಸಿಕೊಳ್ಳಲು ಶ್ರಮಿಸುವಿರಿ. ಗುರು-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಕೆಲವೊಮ್ಮೆ ಅಲಂಕಾರ ಪ್ರಿಯರಾಗುವ ನಿಮಗೆ ಬೇರೆಯರ ಅಪಹಾಸ್ಯ ತಿಳಿಯದೇ ಹೋಗಬಹುದು, ಮಹಿಳೆಯರು ತಮ್ಮ ಆತ್ಮಾಭಿಮಾನದಿಂದ ಹೆಚ್ಚಿನ ಗೌರವ ಪಡೆಯಲಿದ್ದಾರೆ. ಮಧ್ಯಗತಿಯ ಆದಾಯ ನಿಮ್ಮ ಕೋರಿಕೆಗೆ ಸಾಕಾಗದೇ ಹೋಗಬಹುದು ಆದರೆ ಯಾವುದೇ ಕಾರಣಕ್ಕೂ ವಿನಾಕಾರಣ ಸಾಲ ಮಾಡಲು ಹೋಗಬೇಡಿ. ಮನೆಯಲ್ಲಿ ನಡೆಯಲಿರುವ ಮಂಗಳ ಕಾರ್ಯಗಳಿಗೆ ಎಲ್ಲಾ ಬಂಧು ಗಳಿಂದಲೂ ನೆರವು ದೊರೆಯಲಿದೆ. ಶಸ್ತ್ರಚಿಕಿತ್ಸಾ ವೈದ್ಯರಿಗೆ ಬೇಡಿಕೆ ದೇಶ-ವಿದೇಶ ಗಳಲ್ಲಿ ಹೆಚ್ಚಲಿದೆ, ಆರೋಗ್ಯದ ವಿಚಾರದಲ್ಲಿ ಉದಾಸೀನತೆ ಬೇಡ.ಭಾನು-ಬುಧ-ಗುರು-ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಸಮತೋಲನೆಯಲ್ಲಿರುವ ಆಯ-ವ್ಯಯಗಳು ಉಳಿತಾಯದ ವಿಚಾರವನ್ನು ದೂರ ಮಾಡಲಿದೆ, ರಿಯಲ್ ಎಸ್ಟೇಟ್ ವ್ಯವಹಾರಸ್ಥರಿಗೆ ಆದಾಯ ತೆರಿಗೆ ಇಲಾಖೆಯಿಂದ ವಿಚಾರಣೆಯಾಗಬಹುದು, ಆದ್ದರಿಂದ ಲೆಕ್ಕಪತ್ರಗಳನ್ನು ಸರಿಯಾಗಿಟ್ಟುಕೊಳ್ಳುವುದು ಮೇಲು, ಮನೆಯಲ್ಲಿ ಹಿರಿಯರು ಧರ್ಮ ಕಾರ್ಯಗಳಿಗೆ ದೊಡ್ಡ ಮೊತ್ತದ ದೇಣಿಗೆ ಕೊಡುವರು, ದುರಭ್ಯಾಸಗಳಿದ್ದಲ್ಲಿ ಅವುಗಳಿಂದ ದೂರವಾದರೆ ಮಾತ್ರ ಉತ್ತಮ, ಆರೋಗ್ಯ ಸಾಧ್ಯ, ಲೇವಾದೇವಿ ವ್ಯವಹಾರ ಸಧ್ಯಕ್ಕೆ ಬೇಡ, ಯುವತಿಯರಿಗೆ ಉತ್ತಮ ದಿನಗಳು. ಸೋಮ-ಶುಕ್ರ-ಶನಿ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ಎಲ್ಲದಕ್ಕೂ ಉಪಾಯ ಪರಿಹಾರವನ್ನು ಹೇಳುತ್ತಿದ್ದ ನಿಮ್ಮ ನೆನಪಿನ ಖಜಾನೆ ಸಂಸಾರದ ತೊಳಲಾಟದಿಂದಾಗಿ ಕ್ರಮೇಣ ಬರಿದಾಗಲಿದೆ, ಹಾಗೆಂದ ಮಾತ್ರಕ್ಕೆ ಚಿಂತೆಬೇಡ. ಕಡಿತವಾಗುತ್ತಿರುವ ಆದಾಯ ನಿಮ್ಮ ಕನಸುಗಳನ್ನು ಮುಂದೂಡಲಿದೆ, ಪರಿಸ್ಥಿತಿ ಹೀಗಿರುವಾಗ ನೀವು ಮತ್ತೊಬ್ಬರಿಗೆ ನೆರವಾಗಲು ಹೋಗಿ ತೊಂದರೆಗೆ ಸಿಲುಕಬೇಡಿ, ನವದಂಪತಿಗಳು ಸಂಸಾರದಲ್ಲಿ ಸುಖ, ಸಂತೋಷಗಳನ್ನು ಕಾಣುವುದನ್ನು ಬಿಟ್ಟು ಪರಸ್ಪರ ದೋಷಾರೋಪಣೆಯಲ್ಲೇ ಕಾಲಕಳೆಯುವರು, ಕಾಲುಗಳಲ್ಲಿ ಸೆಳೆತ, ನೋವು ಕಾಣಿಸಿಕೊಳ್ಳಲಿದೆ. ತಜ್ಞ ವೈದ್ಯರನ್ನು ಕಾಣಿರಿ. ಭಾನು-ಸೋಮ-ಗುರು-ಶುಭ ದಿನಗಳು

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮತ್ತೊಬ್ಬರ ಭರವಸೆ ಮಾತನ್ನು ನಂಬಿ ಹೊಸ ಯೋಜನೆಗಳನ್ನು ಜಾರಿಗೆ ತರಲು ಹೋದರೆ, ಅದು ನಿಮ್ಮ ಕಡು ಮೂರ್ಖತನದ ಮಾತಾದೀತು, ಆದಾಯವು ಅನುಕೂಲಕರವಾಗಿದ್ದರೂ ತೃಪ್ತಿ ಎಂಬುದು ಕಾಣದೇ ಹೋಗಬಹುದು, ಮಡದಿ-ಮಕ್ಕಳ ನಿರಂತರ ಬೇಡಿಕೆ ನಿಮ್ಮನ್ನು ಹೈರಾಣಾಗಿಸು ವುದು, ಆತ್ಮೀಯರಿಗೆ ಕೊಟ್ಟಮಾತು ಯಥಾವತ್ತಾಗಿ ಈಡೇರಿಸುವಿರಿ, ಕೆಲವರ ವಿಚಾರದಲ್ಲಿ ತಟಸ್ಥರಾಗಿರುವುದು ಮೇಲು, ನೆಂಟರೊಬ್ಬರ ಆರೋಗ್ಯವನ್ನು ವಿಚಾರಿಸಲು ಹೋಗಿ ನೀವೇ ಅನಾರೋಗ್ಯಕ್ಕೆ ಒಳಗಾಗಬಹುದು, ವಿಷ್ಣು ಸಹಸ್ರನಾಮ ಪಠಿಸಿ. ಬುಧ-ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಸದಾ ಡೋಲಾಯಮಾನವಾದ ಮನಸ್ಥಿತಿಯಲ್ಲಿರುವ ನಿಮ್ಮಲ್ಲಿ ಕೆಲವೊಮ್ಮೆ ನಿಮಗೇ ತಿಳಿಯದಂತೆ ಕಾಮ ಕ್ರೋಧಾದಿಗಳು ಮೂಡಲಿವೆ, ಮನಸ್ಸಿನ ಹತೋಟಿ ಧ್ಯಾನಾದಿಗಳಿಂದ ಮಾತ್ರ ಸಾಧ್ಯ ಎಂಬುದು ತಿಳಿದ ವಿಚಾರವೇ ಆಗಿದೆ. ಸಧ್ಯದ ಪರಿಸ್ಥಿತಿಯಲ್ಲಿ ಕೌಟುಂಬಿಕ ವಿಚಾರಗಳಲ್ಲಿ ಅನಿರೀಕ್ಷಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಹೋಗಬೇಡಿ, ತಂತ್ರಜ್ಞಾನ ಕ್ಷೇತ್ರದಲ್ಲಿ ಅಧ್ಯಯನ ಮಾಡುವವರಿಗೆ ಉತ್ತೇಜನ ಸಿಗಲಿದೆ, ಜೊತೆಗೆ ಉತ್ತಮ ಆದಾಯವನ್ನೂ ನಿರೀಕ್ಷಿಸಬಹುದು, ಮನೆಯಲ್ಲಿ ಮಂಗಳ ಕಾರ್ಯ ನಿರಂತರ ನಡೆಯಲಿದೆ. ಗೋ ಸೇವೆ ಮಾಡಿ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ನೀವು ತೋರುವ ಆಲಸ್ಯತನದಿಂದಾಗಿ ಸಕಾಲದಲ್ಲಾಗಬೇಕಾಗಿರುವ ಕೆಲಸ ಕಾರ್ಯಗಳೆಲ್ಲವೂ ಮಂದಗತಿಯಲ್ಲಿ ಸಾಗಿ ನಷ್ಟವನ್ನುಂಟು ಮಾಡಬಹುದು, ಇದನ್ನು ಲಘುವಾಗಿ ಪರಿಗಣಿಸುವುದು ಸರಿಯಲ್ಲ. ಹೊಸದಾಗಿ ಮದುವೆಯಾದ ದಂಪತಿಗಳ ಸಂಸಾರದಲ್ಲಿ ಬಿರುಕು ಕಾಣಿಸಿಕೊಳ್ಳಲಿದೆ, ಹಿರಿಯರು ಆದಷ್ಟು ಬೇಗ ಇದನ್ನು ಸರಿಪಡಿಸುವುದು ಉತ್ತಮ, ಸಿನಿಮಾರಂಗದಲ್ಲಿರುವ ನಟ-ನಟಿಯರು ತುಸು ಎಚ್ಚರದಿಂದ ಕಾರ್ಯನಿ ರ್ವಹಿಸುವುದು ಮೇಲು.ಬರಬೇಕಾಗಿರುವ ಬಾಕಿ ಹಣವು ಇಷ್ಟರಲ್ಲೇ ಕೈಸೇರಲಿದೆ, ಗುರು ಸೇವೆ ಮಾಡಿ. ಸೋಮ-ಮಂಗಳ-ಗುರು-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಸಮಾಜಕ್ಕಾಗಿ ವಿಶೇಷ ಸೇವೆ ಸಲ್ಲಿಸಿದ ನಿಮಗೆ ಸಮಾಜದಿಂದ ಗೌರವ ಸಂದಾಯವಾಗಲಿದೆ, ವಿದ್ಯಾರ್ಥಿಗಳು ಮನಸ್ಸಿಟ್ಟು, ಅಧ್ಯಯನ ಮಾಡಿದಲ್ಲಿ ಮಾತ್ರ ಉತ್ತಮ ಫಲಿತಾಂಶ ಕಾಣಲು ಸಾಧ್ಯ, ಹೊಸ ಸೊತ್ತು ಅಥವಾ ಮನೆಯನ್ನು ಕೊಳ್ಳಲು ಸನ್ನಿವೇಶವು ಅನುಕೂಲಕರವಾಗಿಲ್ಲದೇ ಇರುವುದರಿಂದ ಈ ವಿಚಾರವನ್ನು ಕೆಲಕಾಲ ಮುಂದೂಡುವುದು ಉತ್ತಮ. ಗುತ್ತಿಗೆದಾರರಿಗೆ ಸರ್ಕಾರದ ಬದಲಾದ ನಿಲುವಿನಿಂದಾಗಿ ಹೆಚ್ಚಿನ ನಷ್ಟವುಂಟಾಗಲಿದೆ. ಆಗಬೇಕಾಗಿರುವ ಶುಭ ಕಾರ್ಯಗಳನ್ನು ಆದಷ್ಟು ಬೇಗ ಮಾಡಿ ಮುಗಿಸುವುದು ಒಳ್ಳೇಯದು. ಗೋ ಸೇವೆ ಮಾಡಿ. ಭಾನು-ಗುರು-ಶನಿ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಮಂದಗತಿಯಲ್ಲಿದ್ದ ಆದಾಯದಲ್ಲಿ ಈ ವಾರ ಚೇತರಿಕೆ ಕಾಣಲಿದೆ, ಹಾಗೆಂದ ಮಾತ್ರಕ್ಕೆ ಮಿತಿಮೀರುತ್ತಿರುವ ಖರ್ಚು-ವೆಚ್ಚಗಳ ಮೇಲೆ ಹಿಡಿತ ಸಾಧಿಸುವುದು ಬಹಳಮುಖ್ಯ, ಇಷ್ಟುದಿನ ಚಂಚಲವಾಗಿದ್ದ ಮನಸ್ಸು ಹತೋಟಿಗೆ ಬರಲಿದೆ, ವಿದೇಶದಲ್ಲಿರುವ ಮಗನ ಆದಾಯದಲ್ಲಿ ಅನಿರೀಕ್ಷಿತವಾಗಿ ಹೆಚ್ಚಳವಾಗಲಿದೆ, ಮಕ್ಕಳ ವಿದ್ಯಾಭ್ಯಾಸದ ಚಿಂತೆ ದೂರವಾಗುವುದು, ಆಯುರ್ವೇದ, ಯುನಾನಿ ಮೊದಲಾದ ಪಾರಂಪರಿಕ ವೈದ್ಯರಿಗೆ ಬೇಡಿಕೆ ಹೆಚ್ಚಲಿದೆ, ಬಂಡವಾಳ ಹೂಡಿಕೆ ಬಗ್ಗೆ ಗಮನಹರಿಸುವುದು ಉತ್ತಮ, ತೀರ್ಥಯಾತ್ರೆ ಮಾಡುವಿರಿ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಆದಾಯದಲ್ಲಿ ಚೇತರಿಕೆ ಕಂಡುಬರುವುದರಿಂದ ನಿಮ್ಮಲ್ಲೂ ಹೊಸ ಚೈತನ್ಯ ಮೂಡಲಿದೆ. ಇದನ್ನು ಬಹಳಕಾಲ ಕಾಪಾಡಿಕೊಳ್ಳುವುದು ಮೇಲು. ಶುಭ ಸಮಾರಂಭಗಳಲ್ಲಿ ಅಮೂಲ್ಯ ವಸ್ತುಗಳ ಬಗ್ಗೆ ಜಾಗೃತರಾಗಿರುವುದು ಉತ್ತಮ. ನಿರುದ್ಯೋಗಿ ಪದವೀಧರರಿಗೆ ನೌಕರಿಯು ತಾನಾಗಿಯೇ ಹುಡುಕಿ ಕೊಂಡುಬರಲಿದೆ, ಮಲ್ಲಯುದ್ಧ ಪ್ರವೀಣರಿಗೆ ಸರ್ಕಾರದಿಂದ ಹೆಚ್ಚಿನ ಸೌಲಭ್ಯ ದೊರೆಯಲಿದೆ, ಮಿತಿ-ಮೀರಿದ ಮಾತು ಕೆಲವೊಮ್ಮೆ ಅಪಾಯಕ್ಕೆ ಕಾರಣವಾಗಬಹುದು. ಹಿರಿಯರ ಆಣತಿಯಂತೆ ನಡೆಯುವುದರಲ್ಲೇ ನಿಮ್ಮ ಹಿತವಡಗಿದೆ. ಸೋಮ-ಗುರು-ಶನಿ-ಶುಭ ದಿನಗಳು

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಮಕ್ಕಳ ಭವಿಷ್ಯದ ವಿಚಾರದಲ್ಲಿ ಗಟ್ಟಿ ನಿರ್ಧಾರಗಳನ್ನು ತೆಗೆದುಕೊಳ್ಳದೇ ಹೋದಲ್ಲಿ ಮುಂದೆ ತೊಂದರೆಯಾಗಬಹುದು. ಬಂಧುಗಳೊಂದಿಗೆ ಮಾತನಾಡುವಾಗ ಕಾಠಿಣ್ಯ ಬೇಡ. ಅವಿವಾಹಿತರಿಗೆ ಉತ್ತಮ ಸಂಬಂಧದೊಂದಿಗೆ ಕಂಕಣ ಬಲ ಇಷ್ಟರಲ್ಲೇ ಕೂಡಿಬರಲಿದೆ ಹಿರಿಯರ ನೆರವನ್ನು ನಿರೀಕ್ಷಿಸುವಿರಾದರೆ ನಿಮ್ಮ ಗುಣಸ್ವಭಾವದಲ್ಲಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳುವುದು ಮೇಲು. ದಿನಸಿ ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸುವುದು ಮೇಲು, ಪರ ಸ್ತ್ರೀಯರಿಂದ ಕಿರಿಕಿರಿಯುಂಟಾಗಲಿದೆ, ಮತ್ತೊಬ್ಬರ ವಿಚಾರದಲ್ಲಿ ನಿಮ್ಮ ಪ್ರವೇಶ ಬೇಡ.ಭಾನು-ಗುರು-ಶುಕ್ರ-ಶುಭ ದಿನಗಳು.

# ತಮಿಳುನಾಡು ಬಿಎಸ್‌ಪಿ ಅಧ್ಯಕ್ಷ ಆರ್ಮ್‌ಸ್ಟ್ರಾಂಗ್ ಹತ್ಯೆ

ಚೆನ್ನೈ, ಜು.7 - ತಮಿಳುನಾಡು ಬಿಎಸ್‌ಪಿ ಅಧ್ಯಕ್ಷ ಕೆ. ಆರ್ಮ್‌ಸ್ಟ್ರಾಂಗ್ ಅವರನ್ನು ಗುಂಪೊಂದು ಹತ್ಯೆ ಮಾಡಿದೆ. ಈ ಸಂಬಂಧ 8 ಶಂಕಿತರನ್ನು ಶುಕ್ರವಾರ ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸಂದೀಪ್ ರಾಯ್ ರಾಥೋಡ್ ತಿಳಿಸಿದ್ದಾರೆ.

ಆರ್ಮ್‌ಸ್ಟ್ರಾಂಗ್ ಅವರು ಯಾವುದೇ ಜೀವ ಬೆದರಿಕೆ ಎದುರಿಸುತ್ತಿರಲಿಲ್ಲ, ಹತ್ಯೆ ಹಿಂದೆ ರಾಜಕೀಯ ಕಾರಣಗಳಿರುವ ಸಾಧ್ಯತೆ ಕಡಿಮೆ ಎಂದು ಆಯುಕ್ತರು ಹೇಳಿದ್ದಾರೆ.

ಶುಕ್ರವಾರ ಸಂಜೆ 7.15ರ ಸಮಯದಲ್ಲಿ ಆರ್ಮ್‌ಸ್ಟ್ರಾಂಗ್ ಅವರು ತಮ್ಮ ನಿರ್ಮಾಣ ಹಂತದಲ್ಲಿರುವ ಮನೆಯನ್ನು ವೀಕ್ಷಿಸಲು ತೆರಳುತ್ತಿದ್ದರು. ಆಗ ಅವರ ಮೇಲೆ ದಾಳಿ ನಡೆಸಲಾಗಿದೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅವರು ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಆಯುಕ್ತ ಸಂದೀಪ್ ರಾಯ್ ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಘಟನೆ ನಡೆದ ಮೂರು ಗಂಟೆಗಳಲ್ಲೇ ಎಂಟು ಜನರನ್ನು ಬಂಧಿಸಿದ್ದಾರೆ ಎಂದವರು ಹೇಳಿದರು. ಈಗ ಬಂಧಿತರು ಘಟನೆಗೆ ಸಂಬಂಧಿಸಿದವರಲ್ಲ ಎಂದು ಕೆಲ ರಾಜಕೀಯ ಪಕ್ಷಗಳು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸ್ ಆಯುಕ್ತರು, ಅವರು ಅಪರಾಧ ಮಾಡಿದ್ದಾರೆ ಎಂಬ ಬಗ್ಗೆ ಸಾಕಷ್ಟು ಸಾಕ್ಷಿಗಳಿರುವ ಕಾರಣ ಬಂಧಿಸಿದ್ದೇವೆ. ಮುಂದಿನ ವಿಚಾರಣೆ ನಂತರವೇ ಅವರು ನಿಜವಾದ ತಪ್ಪಿತಸ್ಥರೇ ಅಲ್ಲವೇ ಎಂಬುದು ಗೊತ್ತಾಗಲಿದೆ ಎಂದಿದ್ದಾರೆ.

ಈ ಪ್ರಕರಣದಲ್ಲಿ ರಾಜಕೀಯ ಉದ್ದೇಶ ಇರುವ ಸಾಧ್ಯತೆ ತೀರ ಕಡಿಮೆ. ಹಿಂದಿನ ವೈಷಮ್ಯದಿಂದ ಹತ್ಯೆ ನಡೆದಿರುವ ಸಾಧ್ಯತೆಯನ್ನು ತಳ್ಳಿ ಹಾಕಲಾಗದು ಎಂದವರು ಹೇಳಿದ್ದಾರೆ.

## ಡಿಸಿಸಿ ಬ್ಯಾಂಕಿನ ತಾವರ‍್ಯನಾಯ್ಕ್ ನಿವೃತ್ತಿ



ದಾವಣಗೆರೆ, ಜು.6- ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಕೇಂದ್ರ ಕಚೇರಿಯ ಪ್ರಧಾನ ವ್ಯವಸ್ಥಾಪಕ ತಾವರ‍್ಯನಾಯ್ಕ್ ಅವರು ಶನಿವಾರ ಸೇವೆಯಿಂದ ವಯೋನಿವೃತ್ತರಾಗಿದ್ದಾರೆ.

1997ರಲ್ಲಿ ಶಿವಮೊಗ್ಗ ಡಿಸಿಸಿ ಬ್ಯಾಂಕಿನಲ್ಲಿ ಸೇವೆ ಆರಂಭಿಸಿದ ತಾವರ‍್ಯನಾಯ್ಕ್, ಅಲ್ಲಿ ಕ್ಷೇತ್ರಾಧಿಕಾರಿಯಾಗಿ ಮತ್ತು ಹೊಳೆಹೊನ್ನೂರು, ಬಸವಾಪಟ್ಟಣದಲ್ಲಿ ಶಾಖಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ್ದಾರೆ.

2003ರಲ್ಲಿ ದಾವಣಗೆರೆ ಡಿಸಿಸಿ ಬ್ಯಾಂಕಿಗೆ ವರ್ಗಾವಣೆಗೊಂಡ ತಾವರ‍್ಯನಾಯ್ಕ್ ಅವರು ಇಲ್ಲಿ ವ್ಯವಸ್ಥಾಪಕರಾಗಿ, ಎಜಿಎಂ, ಡಿಜಿಎಂ ಮತ್ತು ಪ್ರಧಾನ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೃಷಿ ವಿವಿಯಲ್ಲಿ ಪದವಿ ಪಡೆದಿರುವ ತಾವರ‍್ಯನಾಯ್ಕ್ ಅವರು ಮೂಲತಃ ಚನ್ನಗಿರಿ ತಾಲ್ಲೂಕಿನ ಎನ್. ಗಾಣದಕಟ್ಟೆ ಗ್ರಾಮದವರು.

## ದೇಶೀಯ ಹಗುರ ಟ್ಯಾಂಕ್‌ನ ಪರೀಕ್ಷೆ

**(1ನೇ ಪುಟದಿಂದ)** ಸಂಸ್ಥೆಗಳು ಜೊತೆಯಾಗಿ ಈ ಟ್ಯಾಂಕ್ ಅಭಿವೃದ್ಧಿಪಡಿಸಿವೆ. 25 ಟನ್‌ಗಳ ಈ ಟ್ಯಾಂಕ್ ಗಡಿಯಲ್ಲಿ ತ್ವರಿತವಾಗಿ ಬಳಸಿಕೊಳ್ಳಲು ಉಪಯುಕ್ತವಾಗಿದೆ. ಗುಜರಾತ್‌ನ ಹಾಜಿರಾ ಎಂಬಲ್ಲಿ ಈ ಟ್ಯಾಂಕ್‌ಗಳ ಆರಂಭಿಕ ಪ್ರಯೋಗ ನಡೆಸಲಾಗಿದೆ. ಗಡಿಯಲ್ಲಿರುವ ಬೆಟ್ಟಗಳ ಪ್ರದೇಶದಲ್ಲಿ 350 ಹಗುರ ಟ್ಯಾಂಕ್‌ಗಳನ್ನು ನಿಯೋಜಿಸಲು ಭಾರತೀಯ ಸೈನ್ಯ ಪರಿಶೀಲಿಸುತ್ತಿದೆ.

# ಮೌಂಟ್ ಎವರೆಸ್ಟ್‌ನಲ್ಲಿ ಸ್ವಚ್ಛತಾ ಅಭಿಯಾನ

## 11 ಟನ್ ಕಸ, ನಾಲ್ಕು ಮೃತದೇಹ ಹಾಗೂ ಅಸ್ಥಿಪಂಜರ ತೆರವು






ಕಠ್ಮಂಡು, ಜು. 6 - ವಿಶ್ವದ ಅತಿ ಎತ್ತರದ ಮೌಂಟ್ ಎವರೆಸ್ಟ್ ಪರ್ವತದಲ್ಲಿ ಹರಡಿರುವ ಕಸವನ್ನು ತೆರವುಗೊಳಿಸಲು ನೇಪಾಳ ಸರ್ಕಾರ ಮುಂದಾಗಿದೆ. ಪರ್ವತಾರೋಹಿ ಶೆರ್ಪಾ ಒಬ್ಬರ ಮಾರ್ಗದರ್ಶನದಲ್ಲಿ ಈ ಕಾರ್ಯ ಕೈಗೊಳ್ಳಲಾಗಿದೆ. ಕಸದ ರಾಶಿಯನ್ನು ತೆರವುಗೊಳಿಸಲು ವರ್ಷಗಳೇ ಬೇಕಾಗಲಿವೆ ಎಂದು ಅಂದಾಜಿಸಲಾಗಿದೆ.

ನೇಪಾಳ ಸರ್ಕಾರದ ಅನುದಾನ ಪಡೆದಿರುವ ಸೈನಿಕರು ಹಾಗೂ ಪರ್ವತಾರೋಹಿಗಳಾದ ಶೆರ್ಪಾಗಳ ತಂಡ ಕಸ ತೆರವು ಕಾರ್ಯದಲ್ಲಿ ತೊಡಗಿದೆ.

ಕಸ ತೆರವುಗೊಳಿಸುವ ಹಾಗೂ ವರ್ಷಗಳಿಂದ ಮೌಂಟ್ ಎವರೆಸ್ಟ್ ತುದಿಯಲ್ಲಿ ಸಿಲುಕಿರುವ ಮೃತ ದೇಹಗಳನ್ನು ಹೊರ ತರಲು ಶೆರ್ಪಾಗಳು ಶ್ರಮಿಸುತ್ತಾರೆ. ಈ ತಂಡ ಪರ್ವತದಿಂದ ಇಳಿಸುವ ಕಸವನ್ನು ಸೈನ್ಯ ವಿಲೇವಾರಿ ಮಾಡುತ್ತಿದೆ.

ನೇಪಾಳ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸೈನಿಕರು ಹಾಗೂ ಶೆರ್ಪಾಗಳ ತಂಡ ಇದುವರೆಗೂ 11 ಟನ್ ಕಸ, ನಾಲ್ಕು ಮೃತ ದೇಹ ಹಾಗೂ ಅಸ್ಥಿಪಂಜರವನ್ನು ಎವರೆಸ್ಟ್‌ನಿಂದ ತೆರವುಗೊಳಿಸಿದೆ.

ಈ ಬಗ್ಗೆ ಮಾತನಾಡಿರುವ ಶೆರ್ಪಾಗಳ ತಂಡದ ನೇತೃತ್ವ ವಹಿಸಿರುವ ಆಂಗ್ ಬಾಬು ಶೆರ್ಪಾ, ಎವರೆಸ್ಟ್ ತುಟ್ಟ ತುದಿಗೆ ತಲುಪುವುದಕ್ಕಿಂತ ಮುಂಚಿನ ಕೊನೆಯ ಶಿಬಿರವಾದ ಸೌತ್ ಕೋಲ್‌ನಲ್ಲಿ ಸುಮಾರು 40 ರಿಂದ 50 ಟನ್ ಕಸ ಇದೆ ಎಂದು ಹೇಳುತ್ತಾರೆ.

ಈ ಕಸದಲ್ಲಿ ಹಳೆಯ ಟೆಂಟ್, ಆಹಾರದ ಪಟ್ಟಣಗಳು ಹಾಗೂ ಆಕ್ಸಿಜನ್ ಡಬ್ಬಿಗಳೇ ಹೆಚ್ಚಾಗಿವೆ ಎಂದವರು ತಿಳಿಸಿದ್ದಾರೆ.

1953ರಲ್ಲಿ ಮೊದಲ ಬಾರಿ ಮೌಂಟ್ ಎವರೆಸ್ಟ್ ಏರಲು ಸಾಧ್ಯವಾಗಿತ್ತು. ನಂತರದಿಂದ ಸಾವಿರಾರು ಜನರು ಎವರೆಸ್ಟ್ ಪರ್ವತ ಏರುವ ಸಾಧನೆ ಮಾಡಿದ್ದಾರೆ. ಆದರೆ, ಪರ್ವತ ಏರುವವರು ಹೆಚ್ಚಾದಷ್ಟೇ, ಕಸದ ರಾಶಿಯೂ ಹೆಚ್ಚಾಗುತ್ತಾ ಬಂದಿದೆ. ಪರ್ವತಾರೋಹಣದ ವೇಳೆ ಶೃಂಗದ ಸಮೀಪ ಸಾವನ್ನಪ್ಪಿದವರ ಮೃತದೇಹಗಳನ್ನು ವಾಪಸ್ ತರಲೂ ಸಾಧ್ಯವಾಗಿಲ್ಲ.

ಕಸದ ರಾಶಿ ಹೆಚ್ಚಾಗುತ್ತಿರುವುದನ್ನು ನೇಪಾಳ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಪರ್ವತ ಏರುವವರು ತಮ್ಮ ಕಸವನ್ನೂ ವಾಪಸ್ ತರಬೇಕು, ಇಲ್ಲವಾದರೆ ಪರ್ವತಾರೋಹಣಕ್ಕೆ ಮುಂಚೆ ಇರಿಸಿದ ಠೇವಣಿ ವಾಪಸ್ ಕೊಡುವುದಿಲ್ಲ ಎಂದು ಸರ್ಕಾರ ಷರತ್ತು ವಿಧಿಸಿದೆ. ನಂತರ ಚಾರಣಿಗರಲ್ಲಿ ಪರಿಸರ ಅರಿವು ಹೆಚ್ಚಾಗಿದೆ ಹಾಗೂ ಅವರು ಬಿಟ್ಟು ಬರುವ ಕಸದ ಪ್ರಮಾಣವು ಕಡಿಮೆಯಾಗಿದೆ.

ಆದರೆ, ಹಿಂದಿನ ದಶಕಗಳಲ್ಲಿ ಬಿಟ್ಟು ಬಂದಿರುವ ಕಸ ಹಾಗೆ ಉಳಿದಿದೆ. ಶೆರ್ಪಾಗಳ ತಂಡ ಈಗ ಕಸ ಹಾಗೂ ಮೃತ ದೇಹಗಳನ್ನು ವಾಪಸ್ ತರುವ ಕೆಲಸದಲ್ಲಿ ತೊಡಗಿದೆ.

ಪರ್ವತ ಚಾರಣಕ್ಕೆ ಅನುಕೂಲಕರವಾದ ವಾತಾವರಣ ಇರುವ ಸಂದರ್ಭದಲ್ಲಿ ಕಸ ತೆರವು ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ ಎಂದು ಬಾಬು ಹೇಳುತ್ತಾರೆ.

ಪರ್ವತದ ಮೇಲೆ ಹಠಾತ್ತನೆ ಹಿಮಗಾಳಿ ಬೀಸುತ್ತದೆ ಮತ್ತು ತಾಪಮಾನ ಹಠಾತ್ತನೆ ಕುಸಿಯುತ್ತದೆ. ಇದರ ಜೊತೆಗೆ ಆಕ್ಸಿಜನ್ ಪ್ರಮಾಣ ಸಾಮಾನ್ಯಕ್ಕಿಂತ ಮೂರನೇ ಒಂದರಷ್ಟು ಮಾತ್ರ ಇರುತ್ತದೆ. ಕಸ ಹಿಮದಲ್ಲಿ ಹುದುಗಿರುವ ಕಾರಣ, ಹಿಮ ಒಡೆದು ಕಸ ಹೊರ ತರುವುದು ಸವಾಲಿನ ಕೆಲಸ ಎಂದವರು ಹೇಳಿದ್ದಾರೆ.

ಹಿಮದಲ್ಲಿ ಸಿಲುಕಿದ್ದ ದೇಹ ಒಂದನ್ನು ಹೊರ ತೆಗೆಯಲು ಎರಡು ದಿನ ಬೇಕಾಯಿತು. ಹವಾಮಾನ ಹದಗೆಟ್ಟ ಕಾರಣ ಮೊದಲ ದಿನ ಪ್ರಯತ್ನ ಕೈಗೂಡದೇ ತಂಡ ವಾಪಸ್ಸಾಗಬೇಕಾಯಿತು. ಪರಿಸ್ಥಿತಿ ಸುಧಾರಿಸಿದ ನಂತರ ಮತ್ತೆ ಚಾರಣ ಮಾಡಿ ಮೃತದೇಹ ವಾಪಸ್ ತರಲು ಸಾಧ್ಯವಾಯಿತು.

ಮತ್ತೊಂದು ಮೃತ ದೇಹ 8,400 ಮೀಟರ್ ಎತ್ತರದ ಪ್ರದೇಶದಲ್ಲಿ ಸಿಲುಕಿತ್ತು. ಇದನ್ನು ಎರಡನೇ ಶಿಬಿರಕ್ಕೆ ತರಲು 18 ಗಂಟೆಗಳೇ ಬೇಕಾಗಿತ್ತು. ನಂತರ ಹೆಲಿಕ್ಯಾಪ್ಟರ್‌ನಲ್ಲಿ ಮೃತ ದೇಹವನ್ನು ಸಾಗಿಸಲಾಯಿತು ಎಂದು ಬಾಬು ಹೇಳಿದ್ದಾರೆ.

ಮೃತ ದೇಹಗಳನ್ನು ಕಠ್ಮಂಡುವಿನಲ್ಲಿರುವ ತ್ರಿಭುವನ್ ವಿಶ್ವವಿದ್ಯಾಲಯ ಆಸ್ಪತ್ರೆಗೆ ರವಾನಿಸಲಾಗುತ್ತಿದೆ. ಅಲ್ಲಿ ಮೃತ ದೇಹಗಳ ಗುರುತು ಪತ್ತೆಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇದುವರೆಗೂ 11 ಟನ್ ಕಸ ಹಾಗೂ ಮೂರು ಟನ್‌ಗಳಷ್ಟು ಕೊಳೆತ ವಸ್ತುಗಳನ್ನು ಪರ್ವತದಿಂದ ಹೊರ ತೆಗೆಯಲಾಗಿದೆ. ಈ ಎಲ್ಲಾ ಕಸವನ್ನು ಪುನರ್ ಬಳಕೆ ಘಟಕವೊಂದಕ್ಕೆ ರವಾನಿಸಲಾಗುತ್ತಿದೆ. ಕೆಲ ತ್ಯಾಜ್ಯಗಳು 1957ನೇ ಇಸ್ವಿಯಷ್ಟು ಹಳೆಯದಾಗಿವೆ. ಇದರಲ್ಲಿ ರಿಚಾರ್ಜ್ ಬ್ಯಾಟರಿ ಹಾಗೂ ಟಾರ್ಚ್ ಲೈಟ್‌ಗಳೇ ಹೆಚ್ಚಾಗಿವೆ.

ಎತ್ತರದ ಪ್ರದೇಶದಲ್ಲಿ ಆಕ್ಸಿಜನ್ ಪ್ರಮಾಣ ತೀರಾ ಕಡಿಮೆ ಇರುತ್ತದೆ. ಈ ಹಂತಕ್ಕೆ ತಲುಪಿದ ಪರ್ವತಾರೋಹಿಗಳು ಹಾಗೂ ಮಾರ್ಗದರ್ಶಿಗಳು ಜೀವ ಉಳಿಸಿಕೊಳ್ಳುವುದಕ್ಕೇ ಹೆಚ್ಚು ಆದ್ಯತೆ ನೀಡುತ್ತಾರೆ. ಕಸ ವಾಪಸ್ ತರುವುದು ಆದ್ಯತೆಯಾಗಿರುವುದಿಲ್ಲ ಎಂದು ಬಾಬು ಹೇಳುತ್ತಾರೆ

# ಪರಿಣಾಮಕಾರಿ ಬೋಧನೆಗೆ 50 ಶಾಲೆಗಳ ದತ್ತು

## ವಿದ್ಯಾರ್ಥಿಗಳಿಗೆ ಗಣಿತ ಪಾಠ ಮಾಡಿದ ಶಾಸಕ ಪ್ರಕಾಶ ಕೋಳಿವಾಡ



**ರಾಣೇಬೆನ್ನೂರು**

ರಾಣೇಬೆನ್ನೂರು,ಜು.6- ಶಿಕ್ಷಣದ ಬೋಧನೆ ಹಾಗೂ ಕಲಿಕೆಗಳು ಬರೀ ನೆನಪಿಟ್ಟುಕೊಳ್ಳಲು ಮಾತ್ರ ಸೀಮಿತವಾದರೆ ಅದು ಮರೆಯಾಗುತ್ತದೆ. ಅದು ಪರಿಣಾಮಕಾರಿಯಾಗಿದ್ದರೆ ಮರೆಯಾಗದೆ ಸ್ಥಿರವಾಗಿರುತ್ತದೆ. ಆ ದಿಶೆಯಲ್ಲಿ ಪ್ರಯತ್ನಿಸಲು ಹೆಚ್ಚು ವಿದ್ಯಾರ್ಥಿಗ ಳಿರುವ ತಾಲ್ಲೂಕಿನ 50 ಪ್ರಾಥಮಿಕ ಹಾಗೂ ಮಾಧ್ಯಮಿಕ ಸರ್ಕಾರಿ ಶಾಲೆಗಳನ್ನು ತಮ್ಮ ಪಿಕೆಕೆ ಸಂಸ್ಥೆ ದತ್ತು ಪಡೆಯಲಿದ್ದು, ಈ ತಿಂಗಳಾಂತ್ಯದೊಳಗೆ ತರಬೇತಿ ಕಾರ್ಯ ಪ್ರಾರಂಭಿಸಲಾಗುವುದು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ತಾಲ್ಲೂಕಿನ ಮಾಕನೂರ ಗ್ರಾಮದ ಶ್ರೀ ಮಾರ್ಕಂಡೇಶ್ವರ ಶಾಲೆಯಲ್ಲಿ 'ಪಿಕೆ ಜೊತೆ ಕಲಿಕೆ' ಎನ್ನುವ ಕಾರ್ಯಕ್ರಮದನ್ವಯ ವಿದ್ಯಾರ್ಥಿಗಳಿಗೆ ಗಣಿತ ವಿಷಯ ಬೋಧಿಸುತ್ತಾ ಮಾತನಾಡಿದರು.

ಉತ್ತರ ಕರ್ನಾಟಕ, ಅದರಲ್ಲೂ ನಮ್ಮ ಹಾವೇರಿಯಲ್ಲಿ ಉನ್ನತ ಪದವಿ, ಉನ್ನತ ಹುದ್ದೆ ಪಡೆದವರು ವಿರಳಾತಿ ವಿರಳ, ಇದು ನನಗೆ ಬಹಳಷ್ಟು ಬೇಸರ ಉಂಟುಮಾಡಿದೆ. ಸರಾಗವಾಗಿ ಇಂಗ್ಲಿಷ್ ಮಾತನಾಡುವ, ನೈಪುಣ್ಯತೆ ಮುಂತಾದ ಪ್ರತಿಭೆಗಳನ್ನು ಪ್ರದರ್ಶಿಸುವ ಕಾರ್ಯಶೀಲ ಶಿಕ್ಷಣದ ಕೊರತೆಯಿದ್ದು ಅದನ್ನು ನಮ್ಮ ವಿದ್ಯಾರ್ಥಿಗಳಿಗೆ ಬುನಾದಿ ರೂಪದಲ್ಲಿ ದೊರಕಿಸಲು ಪಿಕೆಕೆ ಪ್ರಯತ್ನ ನಡೆಸಿದೆ ಎಂದು ಶಾಸಕರು ಹೇಳಿದರು.

ವಿದ್ಯಾರ್ಥಿಗಳು ಶಿಕ್ಷಕರ ಬಗ್ಗೆ ಗೌರವ ಇಟ್ಟುಕೊಳ್ಳಬೇಕೇ ಹೊರತು ಹೆದರಿಕೆ ಇಟ್ಟುಕೊಳ್ಳಬಾರದು. ತಿಳಿಯದ್ದನ್ನು ಪ್ರಶ್ನಿಸುವುದನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದ ಅವರು, ತಮ್ಮ ಅನುದಾನದಲ್ಲಿ ಹೆಚ್ಚಿನ ಹಣವನ್ನು ಶಿಕ್ಷಣಕ್ಕಾಗಿ ಮೀಸಲಿರಿಸಿದ್ದು, ನಿರುದ್ಯೋಗ ರಹಿತ ರಾಣೇಬೆನ್ನೂರು ಕ್ಷೇತ್ರ ಮಾಡುವ ನನ್ನ ಕನಸು 'ಪಿಕೆ ಜೊತೆ ಕಲಿಕೆ' ಕಾರ್ಯಕ್ರಮಕ್ಕೆ ಸಮಸ್ತ ಶಿಕ್ಷಕ ಸಮೂಹದ ಸಹಕಾರದೊಂದಿಗೆ ಸಾಕಾರಗೊಳ್ಳಲಿದೆ ಎನ್ನುವ ವಿಶ್ವಾಸ ವ್ಯಕ್ತಪಡಿಸಿದರು.

ನನ್ನ 27 ವರ್ಷಗಳ ಶಿಕ್ಷಕ ವೃತ್ತಿಯ ಅನುಭವದಲ್ಲಿ ವಿದ್ಯಾರ್ಥಿಗಳಿಗೆ ಮನವರಿಕೆ ಹಾಗೂ ಪರಿಣಾಮಕಾರಿ ಯಾಗುವಂತಹ ಕೆಲಸ ನನ್ನಿಂದ ಆಗಿರಲಾರದು.

ನಾನು ನನ್ನ ಬೋಧನಾ ವಿಧಾನ ಬದಲಿಸಿಕೊಳ್ಳಬೇಕು ಎಂದು ಶಾಲೆಯ ಗಣಿತ ವಿಷಯದ ಶಿಕ್ಷಕರು ಅಭಿಪ್ರಾಯಿಸಿದರು.

ಪ್ರಭಾರ ಶಿಕ್ಷಣಾಧಿಕಾರಿ ಸೀಮೀಕೇರಿ ಮಾತನಾಡಿ, ಶಿಕ್ಷಕ ವೃಂದ ಕಲಿಯುವುದು ಬಹಳಷ್ಟಿದೆ ಅವರಿಗೆ ತರಬೇತಿ ಶಿಬಿರ ನಡೆಸುತ್ತೇವೆ ಎಂದರು.

# ಭದ್ರಾ ಡ್ಯಾಂ ಗೇಟ್ ದುರಸ್ತಿ ಪೂರ್ಣ



**(1ನೇ ಪುಟದಿಂದ)** ಭಾನುವಾರದ ವೇಳೆಗೆ ಪೂರ್ಣ ದುರಸ್ತಿಯಾಗಲಿದೆ ಎಂದು ಇಂಜಿನಿಯರ್‌ಗಳು ಹೇಳಿದ್ದಾರೆ. ರೈತರು ಆತಂಕ ಪಡಬೇಕಾದ ಅಗತ್ಯವಿಲ್ಲ ಎಂದು ವೈ. ದ್ಯಾವಪ್ಪರೆಡ್ಡಿ ಮತ್ತು ಮುದೇಗೌಡ್ರ ಗಿರೀಶ್ 'ಜನತಾವಾಣಿ' ಗೆ ತಿಳಿಸಿದ್ದಾರೆ.

ಭದ್ರಾ ಮುಖ್ಯ ಇಂಜಿನಿಯರ್ ಶಿವಾನಂದ ಬಣಕಾರ್, ಅಧೀಕ್ಷಕ ಇಂಜಿನಿಯರ್ ಸುಜಾತ, ಭದ್ರಾವತಿ ಇಇ ರವಿಕುಮಾರ್, ಜೆಇ ಸಂತೋಷ್ ಸಮ್ಮುಖದಲ್ಲಿ ಜಲಾಶಯಗಳ ತಂತ್ರಜ್ಞರ ತಂಡದಿಂದ ದುರಸ್ತಿ ಕಾರ್ಯ ನಡೆಯುತ್ತಿದೆ.

## ಇರಾನ್‌ನಲ್ಲಿ ಸುಧಾರಣಾ ಪರ ಅಭ್ಯರ್ಥಿಗೆ ಜಯ

ದುಬೈ, ಜು. 7 - ಇರಾನ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಸುಧಾರಣಾ ಪರ ಅಭ್ಯರ್ಥಿ ಮಸೌದ್ ಪೆಜೆಶ್ಕಿಯಾನ್ ಗೆಲುವು ದಾಖಲಿಸಿದ್ದಾರೆ. ಪಶ್ಚಿಮದ ಜೊತೆ ಸಂಬಂಧ ಸುಧಾರಣೆ ಹಾಗೂ ಹಿಜಾಬ್ ನಿಯಮಗಳನ್ನು ಸಡಿಲಿಸಲು ಮಸೌದ್ ಒಲವು ಹೊಂದಿದ್ದಾರೆ. ಇರಾನ್‌ನ ಧಾರ್ಮಿಕ ಆಡಳಿತದಲ್ಲಿ ಯಾವುದೇ ತೀವ್ರ ಬದಲಾವಣೆ ತರುವುದಿಲ್ಲ ಎಂದು ಚುನಾವಣಾ ಸಂದರ್ಭದಲ್ಲಿ ಅವರು ಹೇಳಿದ್ದರು. ಆದರೂ ಇರಾನ್ ಸರ್ಕಾರ ತೀವ್ರವಾದಿಗಳ ಹಿಡಿತದಲ್ಲಿರುವ ಕಾರಣದಿಂದ ಪೆಜೆಶ್ಕಿಯಾನ್ ಜಾರಿಗೆ ತರಲು ಉದ್ದೇಶಿಸಿರುವ ಸಾಮಾನ್ಯ ಸುಧಾರಣಾ ಕ್ರಮಗಳಿಗೂ ಅಡ್ಡಿಗಳು ಎದುರಾಗುವ ಸಾಧ್ಯತೆ ಇದೆ. ಚುನಾವಣೆಯಲ್ಲಿ ಪೆಜೆಶ್ಕಿಯಾನ್ ಅವರಿಗೆ 16.3 ದಶಲಕ್ಷ ಮತಗಳು ದೊರೆತಿವೆ. ಅವರ ಎದುರಾಳಿ ಸಯೀದ್ ಜಲೀಲಿ ಅವರು 13.5 ದಶ ಲಕ್ಷ ಮತಗಳನ್ನು ಪಡೆದಿದ್ದಾರೆ.

# ಕಲಾವಿದರ ಮಾಸಾಶನ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ, ಜು. 6 - ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಲಾವಿದರನ್ನು ಗುರುತಿಸಿ, ಮಾಸಾಶನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ನಾಡು ನುಡಿಯ ಸೇವೆ, ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಲಾವಿದರಿಗೆ ಇಲಾಖೆಯಿಂದ ಮಾಸಾಶನ ಸೌಲಭ್ಯವನ್ನು ನೀಡಲಾಗುವುದು. ಕಲಾವಿದರು ಹೆಚ್ಚಿನ ಮಾಹಿತಿಗಾಗಿ ಇಲಾಖೆಯನ್ನು ಸಂಪರ್ಕಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.


# ಆದಿಕರ್ನಾಟಕ ವಿದ್ಯಾಭಿವೃದ್ಧಿ ಸಂಸ್ಥೆಯಿಂದ ಬಾಬು ಜಗಜೀವನ್‌ರಾಂ ಪುಣ್ಯಸ್ಮರಣೆ



ದಾವಣಗೆರೆ, ಜು. 6- ನಗರದ ಪಿಜೆ ಬಡಾವಣೆಯಲ್ಲಿ ಆದಿ ಕರ್ನಾಟಕ ವಿದ್ಯಾ ಅಭಿವೃದ್ಧಿ ಸಂಸ್ಥೆಯಿಂದ ಹಸಿರು ಕ್ರಾಂತಿಯ ಮೂಲಕ ಬಡಜನರ ಹಸಿವು ನೀಗಿಸಿದ ಸಮಾಜ ಶೋಷಿತ ವರ್ಗಗಳ ಧ್ವನಿ, ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ ಪುಣ್ಯ ಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಕಾರ್ಯದರ್ಶಿ ಬಿ.ಹೆಚ್. ವೀರಭದ್ರಪ್ಪ ಮಾಲಾರ್ಪಣೆ ಮಾಡಿ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಎಲ್.ಎಂ. ಹನುಮಂತಪ್ಪ ನಿರ್ದೇಶಕರು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



# ಸಾಧನೆಗೆ ಶ್ರಮ ಅತ್ಯವಶ್ಯ : ಮಹಾಬಲೇಶ್ವರ್

## ಧ.ರಾ.ಮ. ವಿಜ್ಞಾನ ಕಾಲೇಜಿನಲ್ಲಿ ಅಂತಿಮ ಬಿ.ಎಸ್ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ

ದಾವಣಗೆರೆ, ಜು. 6- ಏನಾದರೂ ಸಾಧನೆ ಮಾಡಬೇಕಾದರೆ ಶ್ರಮ ಅತ್ಯವಶ್ಯ ಎಂದು ದಾವಣಗೆರೆ ವಿವಿ ರಿಜಿಸ್ಟ್ರಾರ್ ಡಾ.ಯು.ಎಸ್. ಮಹಾಬಲೇಶ್ವರ್ ಹೇಳಿದರು.

ನಗರದ ಧ.ರಾ.ಮ. ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಅಂತಿಮ ಬಿ.ಎಸ್ಸಿ. ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿವಿಧ ವಿಜ್ಞಾನಿಗಳು ಸಂಶೋಧನೆಯನ್ನು ಕೈಗೊಂಡು ಸಾಧನೆಯನ್ನು ಮಾಡಿದ, ವಿಜ್ಞಾನಿ ಸಾಧಕರನ್ನು ಕುರಿತು, ಅರ್ಥಪೂರ್ಣವಾಗಿ ಬಣ್ಣಿಸಿದ ಅವರು, ವಿಜ್ಞಾನ ಕ್ಷೇತ್ರದಲ್ಲಿ ಕಾರ್ಯೋನ್ಮುಖರಾಗಿ ಸಂಶೋಧನಾ ಪ್ರವೃತ್ತಿಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕೆಂದು ತಿಳಿ ಹೇಳಿದರು. ಜೀವನದಲ್ಲಿ ಸಂತೋಷವಾಗಿ ಬದುಕುವುದನ್ನು ಕಲಿಯಬೇಕು. ಸಾಮರಸ್ಯದ ಬದುಕು ಅತಿ ಮುಖ್ಯ ಎಂದರು.

ಪಿಯು ಕಾಲೇಜಿನ ಪ್ರಾಚಾರ್ಯ ಜೆ.ಶಿವಪ್ಪ ಮಾತನಾಡಿ, ಮನಸ್ಸನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಬದುಕುವ ಕಲೆಯನ್ನು ರೂಢಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಎಂ.ಪಿ. ರೂಪಶ್ರೀ ಮಾತನಾಡಿ, ಭಾವಿ ಜೀವನದಲ್ಲಿ ಉನ್ನತವಾದ ಉದ್ದೇಶಗಳನ್ನು ಇಟ್ಟುಕೊಂಡು ಸುಂದರವಾದ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಬೇಕೆಂದು ತಿಳಿ ಹೇಳಿದರು.

ವಿವಿಧ ಸಮಿತಿಗಳ ಸಂಚಾಲಕರಾದ ಡಾ.ಬಿ.ಸಿ. ಚೇತನಾ, ಡಾ. ಗಿರಿಮಲ್ಲೇಶ್ ಬಗರಿ, ಡಾ. ಮೊಹಮ್ಮದ್ ಇಮದಾದುಲ್ಲಾ ಸಾಂಸ್ಕೃತಿಕ ವಿಭಾಗದ ಚಟುವಟಿಕೆಗಳ ವಿಜೇತರಿಗೆ ಬಹುಮಾನ ವಿತರಣೆ ನಡೆಸಿಕೊಟ್ಟರು.

ಕನ್ನಡ ವಿಭಾಗ ಆಯೋಜಿಸಿದ್ದ ತಿಂಗಳ ತಿರುಳು ಕಾರ್ಯಕ್ರಮದ ಬಹುಮಾನ ವಿತರಣೆಯನ್ನು ಶಿವಪ್ಪ ಮಳ್ಳೂರ, ರಸಾಯನಶಾಸ್ತ್ರ ವಿಭಾಗ ಆಯೋಜಿಸಿದ್ದ ರಸಪ್ರಶ್ನೆ ಬಹುಮಾನ ವಿತರಣೆಯನ್ನು ಡಾ.ಬಿ.ಸಿ. ವಸಂತಕುಮಾರ್ ನಡೆಸಿಕೊಟ್ಟರು.

ಸಾಂಸ್ಕೃತಿಕ ಚಟುವಟಿಕೆಯ ಸಂಚಾಲಕ ಡಾ. ಮೊಹಮ್ಮದ್ ಇಮದಾದುಲ್ಲಾ, ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಟಿ ವಸಂತನಾಯ್ಕ ಮತ್ತಿತರರು ಉಪಸ್ಥಿತರಿದ್ದರು. ಎಸ್. ಅರ್ಪಿತ ಪ್ರಾರ್ಥಿಸಿದರು. ಡಾ. ಟಿ. ಮಂಜುನಾಥ ಸ್ವಾಗತಿಸಿದರು. ಐಕ್ಯೂಎಸಿ ಸಂಯೋಜಕ ಡಾ. ಎಲ್.ಎಸ್. ರೋಹಿತ್ ವಂದಿಸಿದರು.

# ಜಗಳೂರು ; ಕೆರೆಗೆ ನೀರು ಬಂದ ಸಂತಸ : ಹಾಲಿ, ಮಾಜಿ ಶಾಸಕರ ಸಂಗಮ, ಸಿಹಿ ತಿನ್ನಿಸಿ ಸಂಭ್ರಮ



ಜಗಳೂರು, ಜು. 7 - ಬರ ಪೀಡಿತ ಕ್ಷೇತ್ರದ ಬಹು ನಿರೀಕ್ಷಿತ 57 ಕೆರೆ ತುಂಬಿಸುವ ಯೋಜನೆ ಅಡಿ ಜಗಳೂರು ಕೆರೆಗೆ ನೀರು ಹರಿದುಬಂದ ಹಿನ್ನೆಲೆಯಲ್ಲಿ ಇಂದು ಪಟ್ಟಣದ ಕೆರೆ ಆವರಣದಲ್ಲಿ ಪಕ್ಷಭೇದ ಮರೆತು ಕ್ಷೇತ್ರದ ಹಾಲಿ ಶಾಸಕ ಬಿ. ದೇವೇಂದ್ರಪ್ಪ ಮತ್ತು ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಹೆಚ್.ಪಿ. ರಾಜೇಶ್ ಅವರ ಸಂಗಮದಲ್ಲಿ ಪರಸ್ಪರ ಅಪ್ಪಿ, ಸಿಹಿ ತಿನ್ನಿಸಿ ಸಂತಸ ಹಂಚಿಕೊಂಡರು. ರಾಜಕೀಯ ಒರತಾಗಿ ಕೆರೆಗೆ ಹಲವು ವರ್ಷದ ನಂತರ ನೀರು ಬಂದ ಸಂತಸ, ಸಾರ್ಥಕತೆ ಅಲ್ಲಿ ಕಂಡುಬಂತು. ಶಾಸಕರುಗಳೊಂದಿಗೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಪಕ್ಷದ ಕಾರ್ಯಕರ್ತರು, ರೈತರು ಪಾಲ್ಗೊಂಡಿದ್ದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮದ್, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ. ಮಹೇಶ್, ಕೆ.ಪಿ. ಪಾಲಯ್ಯ, ಕೆ.ಬಿ. ಕಲ್ಲೇರುದ್ರೇಶ್ ಮುಂತಾದವರು ಇದ್ದರು.

# ಡಾ.ಬಾಬು ಜಗಜೀವನ ರಾಮ್ ಆದರ್ಶಗಳ ಪಾಲನೆಯಾಗಲಿ

## ಜಿಲ್ಲಾ ಕಾಂಗ್ರೆಸ್ ಕಾರ್ಯಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಆಶಯ



ದಾವಣಗೆರೆ, ಜು. 6 - ಮಾಜಿ ಉಪಪ್ರಧಾನಿ ಡಾ. ಬಾಬು ಜಗಜೀವನ ರಾಮ್ ದಲಿತರ ಕ್ಷೇಮಾಭಿವೃದ್ಧಿಗೆ ಹೋರಾಡಿದ್ದರು. ದಲಿತರಿಗೆ ಸಾಮಾಜಿಕ ನ್ಯಾಯ ಪ್ರತಿಪಾದಿಸುತ್ತಿದ್ದರು. ಅಂಥ ವ್ಯಕ್ತಿಯ ಆದರ್ಶಗಳ ಪಾಲನೆ ನಮ್ಮೆಲ್ಲರಿಂದ ಆಗಬೇಕೆಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಅವರು ಹೇಳಿದರು.

ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಭಾಗವಹಿಸಿ ಮಾತನಾಡಿದರು.

ಜಗಜೀವನ ರಾಮ್ ಸ್ವತಂತ್ರ ಹೋರಾಟಗಾರರಾಗಿದ್ದರು, ತುಳಿತಕ್ಕೊಳಗಾದ ಸಮುದಾಯದ ಅಭಿವೃದ್ಧಿಗಾಗಿ ಶ್ರಮಿಸಿದವರು. ಅವರ ಸಾಧನೆಗಳು ಅಪಾರವಾಗಿವೆ. ಅವರು ಈ ದೇಶದ ಉಪ ಪ್ರಧಾನಿ ಆಗಿದ್ದ ವೇಳೆ ಕೃಷಿ ಕ್ಷೇತ್ರಕ್ಕೆ ಅವರ ಕೊಡುಗೆ ಮಹತ್ತರವಾಗಿದೆ ಅವರು ಹಸಿರು ಕ್ರಾಂತಿ ಹರಿಕಾರರೆಂದು ಹೆಸರು ಪಡೆದವರಾಗಿದ್ದಾರೆ ಎಂದರು.

ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಮಲ್ಲಿಕಾರ್ಜುನ್ ಮಾತನಾಡಿ, ದೇಶಾದ್ಯಂತ 'ಬಾಬೂಜಿ' ಎಂದೇ ಕರೆಯಲ್ಪಡುವ ಜಗಜೀವನ ರಾಮ್ ಧೀಮಂತ ರಾಷ್ಟ್ರೀಯ ನಾಯಕ, ಸ್ವಾತಂತ್ರ್ಯ ಮತ್ತು ಸಾಮಾಜಿಕ ನ್ಯಾಯದ ಹೋರಾಟಗಾರ ಹಾಗೂ ಅತ್ಯುತ್ತಮ ಸಂಸದೀಯ ಪಟುವಾಗಿದ್ದರು ಎಂದರು.

ಬಾಲಕ ರಾಮ್ ಆರಾದಲ್ಲಿನ ಮಾಧ್ಯಮಿಕ ಶಾಲೆಯಲ್ಲಿದ್ದಾಗ ಅಲ್ಲಿ ಎರಡು ಪ್ರತ್ಯೇಕ ಕುಡಿಯುವ ನೀರಿನ ಮಡಿಕೆಗಳನ್ನು ಇಡಲಾಗಿತ್ತು. ಇದರಿಂದ ಸಿಟ್ಟಿಗೆದ್ದ ಬಾಲಕ ರಾಮ್ ಎರಡು ಬಾರಿ ಆ ಮಡಿಕೆಗಳನ್ನು ಒಡೆದುಹಾಕಿ ತಮ್ಮ ಕೋಪವನ್ನು ಪ್ರದರ್ಶಿಸಿದ್ದರು ಎಂದರು.

ಪರಿಶಿಷ್ಟ ಜಾತಿ ಕಾಂಗ್ರೆಸ್ ಉತ್ತರ ವಲಯ ಅಧ್ಯಕ್ಷ ರಂಗನಾಥಸ್ವಾಮಿ, ಯುವ ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಸಾಗರ್ ಎಲ್‌ಎಮ್‌ಹೆಚ್ ಮಾತನಾಡಿ, ಭಾರತದಲ್ಲಿ ದೀರ್ಘ ಕಾಲದಿಂದ ಬೆಳೆದುಕೊಂಡು ಬಂದಿದ್ದ ಮೇಲು-ಕೀಳು ತಾರತಮ್ಯ, ಜಾತಿ ಪದ್ಧತಿ, ಅಸ್ಪೃಶ್ಯ ಎಂಬ ಮನೋಭಾವಗಳನ್ನು ತೊಡೆದು ಹಾಕಲು ಸಾಮಾಜಿಕ ನೆಲೆಗಟ್ಟಿನಲ್ಲಿ ಹೋರಾಡಿದವರು ಅನೇಕರು. ಆದರೆ ಅವರ ಏಳಿಗೆಗೆ ಹೆಚ್ಚಿನ ಚುರುಕು ನೀಡಿ ಒಂದು ಸ್ಪಷ್ಟ ರೂಪ ಕೊಟ್ಟ ಕೆಲವೇ ಕೆಲವು ನಾಯಕರಲ್ಲಿ ಬಾಬು ಜಗಜೀವನ್ ರಾಮ್ ಒಬ್ಬರು ಎಂದರು.

ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಚ್. ಜಯಣ್ಣ, ಎನ್‌ಎಸ್‌ಯುಐನ ಮುಜಾಹಿದ್ ಮಾತನಾಡಿ, ದಲಿತರ ಕುರಿತು ತೀವ್ರ ಸಹಾನುಭೂತಿ ಹೊಂದಿದ್ದ ಬಾಬೂಜಿ ತಮ್ಮ ಜ್ಞಾನ ಮತ್ತು ವ್ಯಾಪಕ ದೃಷ್ಟಿಕೋನದಿಂದ ದೇಶ ಸೇವೆ ಮಾಡಿದರು. ಸರ್ವ ಜನರ ಕಲ್ಯಾಣದ ಕನಸು ಕಂಡಿದ್ದರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಕಾಂಗ್ರೆಸ್‌ನ ದ್ರಾಕ್ಷಾಯಣಮ್ಮ, ರಾಜೇಶ್ವರಿ, ಪ್ರವೀಣ್, ಯುವರಾಜ್ ಮತ್ತಿತರರು ಭಾಗಿಯಾಗಿದ್ದರು.



ಚಿತ್ರ : ಜಿಗಳಿ ಪ್ರಕಾಶ್

## ಮೆಕ್ಕೆಜೋಳದಲ್ಲಿ ಎಡೆಕುಂಟೆ...

**ಮಲೇಬೆನ್ನೂರು ಪಟ್ಟಣದ ಆಶ್ರಯ ಕಾಲೋನಿ ಸಮೀಪ ಇರುವ ಗುಡ್ಡದ ಹೊಲಗಳಲ್ಲಿ ಬಿತ್ತನೆ ಮಾಡಿರುವ ಮುಂಗಾರು ಹಂಗಾಮಿನ ಮೆಕ್ಕೆಜೋಳದಲ್ಲಿ ರೈತರು ಎತ್ತುಗಳ ಮೂಲಕ ಹುಲ್ಲು ಸ್ವಚ್ಛ ಮಾಡುವ ಎಡೆಕುಂಟೆ ಹೊಡೆಯುತ್ತಿರುವ ದೃಶ್ಯ ಶುಕ್ರವಾರ ಕ್ಯಾಮರಾ ಕಣ್ಣಿಗೆ ಸೆರೆ ಸಿಕ್ಕಿತು.**

# ನಗರದಲ್ಲಿ ಇಂದು ಪ್ರತಿಭಾ ಪುರಸ್ಕಾರ

ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೆನ್ಷನರ್ಸ್ ಕಮ್ಯೂನ್ ಇವರ ವತಿಯಿಂದ ಮಾಗನೂರು ಬಸಪ್ಪ ಕಾಲೇಜು ಸಭಾಂಗಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

ದಾವಣಗೆರೆ-ಚಿತ್ರದುರ್ಗ ಜಿಲ್ಲಾ ಬ್ಯಾಂಕ್ ನಿವೃತ್ತರ ಒಕ್ಕೂಟದ ಅಧ್ಯಕ್ಷ ಎಸ್.ಟಿ ಶಾಂತಗಂಗಾಧರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮಾಗನೂರು ಬಸಪ್ಪ ಪಿಯು ಕಾಲೇಜಿನ ನಿರ್ದೇಶಕ ಜಿ.ಎನ್.ಹೆಚ್. ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಎಸ್.ಬಿ.ಎಂ. ಪೆನ್ಷನರ್ಸ್ ಕಮ್ಯೂನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಜಿತ್ ಕುಮಾರ್ ನ್ಯಾಮತಿ, ದಾವಣಗೆರೆ-ಚಿತ್ರದುರ್ಗ ಬ್ಯಾಂಕ್ ನಿವೃತ್ತರ ಒಕ್ಕೂಟದ ಗೌರವಾಧ್ಯಕ್ಷ ಜಿ. ರಂಗಸ್ವಾಮಿ ಮತ್ತಿತರರು ಭಾಗವಹಿಸಲಿದ್ದಾರೆ.

# ನಗರದಲ್ಲಿ ಇಂದು ಭೋವಿ ಸಮಾಜದ ಸಭೆ

ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಮಹಾಸ್ವಾಮಿಗಳವರ ದೀಕ್ಷಾ ರಜತ ಮಹೋತ್ಸವದ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಭೋವಿ ಸಮಾಜ ಬಾಂಧವರ ಸಭೆಯನ್ನು ಇಂದು ಬೆಳಿಗ್ಗೆ 9.30ಕ್ಕೆ ಅಪೂರ್ವ ಕಾನ್ಫರೆನ್ಸ್ ಹಾಲ್‌ನಲ್ಲಿ ಕರೆಯಲಾಗಿದೆ ಎಂದು ಜಿಲ್ಲಾ ಭೋವಿ ಸಮಾಜದ ಅಧ್ಯಕ್ಷ ಎಚ್. ಜಯಣ್ಣ ತಿಳಿಸಿದ್ದಾರೆ. ಈ ಸಭೆಗೆ ಭೋವಿ ಗುರು ಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಹಾಗೂ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್. ರವಿಕುಮಾರ್ ಆಗಮಿಸುವರು.

# ತಿಂಗಳ ಅಂತ್ಯಕ್ಕೆ ನೀಟ್ - ಯುಜಿ ಕೌನ್ಸೆಲಿಂಗ್

ನವದೆಹಲಿ, ಜು.7 - ನೀಟ್ - ಯುಜಿ ಪ್ರವೇಶಕ್ಕೆ ಕೌನ್ಸೆಲಿಂಗ್ ಈ ತಿಂಗಳ ಅಂತ್ಯದಲ್ಲಿ ಆರಂಭವಾಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಜುಲೈ ಮೊದಲ ವಾರದಲ್ಲಿ ಕೌನ್ಸೆಲಿಂಗ್ ಆರಂಭವಾಗಬೇಕಿತ್ತು. ಆದರೆ ಅಧಿಕಾರಿಗಳು ಕೌನ್ಸೆಲಿಂಗ್ ಆರಂಭದ ದಿನಾಂಕ ಇಲ್ಲವೇ ವೇಳಾಪಟ್ಟಿಯನ್ನು ಪ್ರಕಟಿಸಿಲ್ಲ. ಕೆಲ ಕಾಲೇಜುಗಳ ಅನುಮತಿ ಪತ್ರವನ್ನು ಇನ್ನೂ ಪಡೆಯಲಾಗುತ್ತಿದೆ. ಹೆಚ್ಚುವರಿ ಸೀಟುಗಳನ್ನು ಸೇರ್ಪಡೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

# ನಗರದಲ್ಲಿ ಇಂದು ತಪಾಸಣಾ ಶಿಬಿರ

ಈಶ್ವ ಪಾಲಿಕ್ಲಿನಿಕ್ ಮತ್ತು ಡಯಾಗ್ನೋಸ್ಟಿಕ್ಸ್‌ನಲ್ಲಿ ಕೀಲು ಮರು ಜೋಡಣೆ ಮತ್ತು ಶಸ್ತ್ರ ಚಿಕಿತ್ಸಾ ತಜ್ಞ ಡಾ. ದೀಪಕ್ ಕೆ. ಕುಮಾರ್ ಅವರಿಂದ ಕೀಲು ಮೂಳೆ ಸಲಹಾ ತಪಾಸಣಾ ಶಿಬಿರ ಮತ್ತು ಮೂಳೆ ಸಾಂದ್ರತಾ ಪರೀಕ್ಷೆ ಶಿಬಿರ ಇಂದು ನಡೆಯಲಿದೆ. ಸಂಪರ್ಕಿಸಿ: 94813 76363.

# ಉತ್ತಮ ಕಾರ್ಯಗಳು ಮರಣದ ನಂತರವೂ ನಮ್ಮನ್ನು ಜೀವಂತವಾಗಿಡುತ್ತವೆ

## ಹರಿಹರದ ನಾಗರಾಜ್ ಮೆಹರ್ವಾಡೆ ನುಡಿ ನಮನ ಕಾರ್ಯಕ್ರಮದಲ್ಲಿ ಶಾಸಕ ಬಿ.ಪಿ.ಹರೀಶ್



ಹರಿಹರ, ಜು.6- ರಕ್ಷಣಾ ವೇದಿಕೆಯ ಜಿಲ್ಲಾ ಉಪಾಧ್ಯಕ್ಷರಾಗಿ, ನಗರಸಭೆ ಸದಸ್ಯರಾಗಿ ಹಾಗೂ ಎಸ್.ಎಸ್.ಕೆ. ಸಮಾಜದ ಅಧ್ಯಕ್ಷರಾಗಿ ಸಮಾಜ ಸೇವೆ ಮಾಡುವ ಮೂಲಕ, ಎಲ್ಲಾ ಸಮಾಜದ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ನಾಗರಾಜ್ ಮೆಹರ್ವಾಡೆಯವರ ಸಾವು ಸಮಾಜಕ್ಕೆ ತುಂಬಾ ನಷ್ಟವನ್ನು ಉಂಟು ಮಾಡಿದೆ ಎಂದು ಶಾಸಕ ಬಿ.ಪಿ. ಹರೀಶ್ ಹೇಳಿದರು.

ನಗರದ ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಸಮಾಜದ ವತಿಯಿಂದ ಇಂದು ಹಮ್ಮಿಕೊಳ್ಳಲಾಗಿದ್ದ, ಸಮಾಜದ ಅಧ್ಯಕ್ಷ ನಾಗರಾಜ್ ಎನ್. ಮೆಹರ್ವಾಡೆಯವರ ಶ್ರದ್ಧಾಂಜಲಿ ಹಾಗೂ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹುಟ್ಟು- ಸಾವು ಸಹಜ. ಆದರೆ, ಅದರ ನಡುವೆ ನಾವು ಮಾಡುವ ಉತ್ತಮ ಕಾರ್ಯಗಳು ನಾವು ಮರಣದ ನಂತರವೂ ನಮ್ಮನ್ನು ಜೀವಂತವಾಗಿರುವಂತೆ ಮಾಡುತ್ತವೆ. ಹಾಗಾಗಿ ನಾಗರಾಜ್ ಅವರು ನಾಡಿನ ಏಳಿಗೆಗಾಗಿ ಮತ್ತು ಸಮಾಜದ ಬಡ ಜನರ ಏಳಿಗೆಗಾಗಿ ಕೊಟ್ಟಂತಹ ಸಾಮಾಜಿಕ ಕೊಡುಗೆ ಅವಿಸ್ಮರಣೀಯವಾಗಿದೆ ಎಂದರು.

ಸಾನ್ನಿಧ್ಯವನ್ನು ವಹಿಸಿದ್ದ ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ನಾಗರಾಜ್ ಮೆಹರ್ವಾಡೆಯವರು ಸಮಾಜದ ಒಳಿತಿಗಾಗಿ ಶ್ರಮಿಸುತ್ತಾ ಬಂದಂತಹ ವ್ಯಕ್ತಿಯಾಗಿದ್ದು, ನಾಡು -ನುಡಿ, ಜಲ, ಭಾಷೆಯ ವಿಚಾರಕ್ಕೆ ಸಂಬಂಧಿಸಿದಂತೆ ಅನೇಕ ರೀತಿಯ ಹೋರಾಟಗಳನ್ನು ಮಾಡಿದ್ದಾರೆ ಎಂದರು.

ವರ್ತಕ ಕೃಷ್ಣ ಸಾ ಭೂತೆ ಮಾತನಾಡಿ, ಸಮಾಜದ ಅಧ್ಯಕ್ಷರಾದ ನಾಗರಾಜ್ ಮೆಹರ್ವಾಡೆ ಅವರ ಅವಧಿಯಲ್ಲಿ ದೇವಸ್ಥಾನದ ಗೋಪುರ ಮತ್ತು ಮಹಾದ್ವಾರ ಕೆಲಸ ಮಾಡಿದ್ದಾರೆ. ಅವರ ಸಾವು ನಿಜಕ್ಕೂ ಬಹಳ ಆಘಾತವನ್ನು ತರಿಸಿದೆ ಎಂದರು.

ತಪೋವನ ಛೇರ್ಮನ್ ಶಶಿಕುಮಾರ್ ಮಾತನಾಡಿ, ನಾಗರಾಜ್ ಅವರ ಐರಣಿ ಹೊಳೆ ಮಠದ ಆವರಣದಲ್ಲಿ ಶಾಲೆ, ಸಭಾಂಗಣ ನಿರ್ಮಾಣ ಮಾಡಿ ಎಲ್ಲಾ ಜನಾಂಗದ ವರ ಒಳಿತಿಗಾಗಿ ಶ್ರಮಿಸಿದ್ದಾರೆ ಎಂದು ಹೇಳಿದರು.

ತುಳಜಪ್ಪ ಭೂತೆ ಮಾತನಾಡಿ, ನಾಗರಾಜ್ ಅವರು ಸಮಾಜದ ಅಧ್ಯಕ್ಷರಾದ ನಂತರ ಕಟ್ಟಿದ ಗೋಪುರವನ್ನು ಇಷ್ಟರಲ್ಲೇ ಉದ್ಘಾಟನೆ ಮಾಡಬೇಕು ಎಂದು ಚಿಂತನೆ ನಡೆಸಿದ್ದರು ಎಂದು ಹೇಳಿದರು.

ಎಸ್.ಎಸ್.ಕೆ. ಸಮಾಜದ ಕಾರ್ಯದರ್ಶಿ ಅಂಬಾಸಾ ಮೆಹರ್ವಾಡೆ ಮಾತನಾಡಿ, ನಾಗರಾಜ್ ಅವರು ನಗರದಲ್ಲಿ ಎಸ್.ಎಸ್.ಕೆ ವೃತ್ತ ಆಗುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಸಮಾಜಕ್ಕೆ ಮೊದಲ ಬಾರಿಗೆ ಶಾಸಕರ ಅನುದಾನವನ್ನು ಪಡೆದು ಇತಿಹಾಸ ನಿರ್ಮಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ದಾವಣಗೆರೆ ಬಸವ ಕಲಾ ಲೋಕ ಬಳಗದವರು ನುಡಿನಮನ ಗೀತೆ ಹಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಎಸ್.ಎಸ್.ಕೆ ಸಮಾಜದ ನೂತನ ಅಧ್ಯಕ್ಷ ಮೋಹನ್ ಕಿರೋಜಿ ವಹಿಸಿದ್ದರು.

ಈ ಸಂದರ್ಭದಲ್ಲಿ ಕೋಡಿಯಾಲ ಹೊಸಪೇಟೆ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮಿಗಳು, ಶಾಂತಾಬಾಯಿ ಮೆಹರ್ವಾಡೆ, ಗಣೇಶ ಮೆಹರ್ವಾಡೆ, ಮೈಸೂರು ದತ್ತು ಸಾ ರಾಜೊಳ್ಳಿ, ಮೈಲಾರಲಿಂಗ ಸಾ, ಪರಶುರಾಮ್ ಕಾಟ್ವೆ, ಅಂಬಾಸಾ ಮೆಹರ್ವಾಡೆ, ತುಳಜಪ್ಪ ಭೂತೆ, ಆಶೋಕ ಭೂತೆ, ಕೃಷ್ಣ ಪಿ ರಾಜೊಳ್ಳಿ, ಮೋತಿಲಾಲ್ ಕಿರೋಜಿ, ಶ್ರೀಕಾಂತ್ ಮೆಹರ್ವಾಡೆ, ರಾಜು ಪೂಜಾರಿ, ಶ್ರೀಪಾದ ಇತರರು ಹಾಜರಿದ್ದರು.

ಕು. ಅರ್ಪಿತಾ ಪ್ರಾರ್ಥಿಸಿದರು. ಪರಶುರಾಮ್ ಕಾಟ್ವೆ ಸ್ವಾಗತಿಸಿದರು. ತುಳಜಪ್ಪ ಭೂತೆ ನಿರೂಪಿಸಿದರು. ಅಂಬಾಸಾ ಮೆಹರ್ವಾಡೆ ಪರಿಚಯ ಮಾಡಿದರು.

# ಮನೆ ಕಳ್ಳತನ: ಇಬ್ಬರ ಬಂಧನ 3 ಮೊಬೈಲ್, 1 ಲ್ಯಾಪ್‌ಟಾಪ್ ವಶ



ದಾವಣಗೆರೆ, ಜು. 6- ಮನೆ ಕಳ್ಳತನ ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಪೊಲೀಸರು ಅವರಿಂದ 1 ಲಕ್ಷ ರೂ. ಮೌಲ್ಯದ 3 ಮೊಬೈಲ್, 1 ಲ್ಯಾಪ್‌ಟಾಪ್ ವಶ ಪಡಿಸಿಕೊಂಡಿದ್ದಾರೆ. ದಾವಣಗೆರೆ ನಗರದ ಚಂದ್ರಶೇಖರ್ ಹಾಗೂ ಶಿವಕುಮಾರ್ ಬಂಧಿತರು. ಇವರನ್ನು ವಿಚಾರಣೆ ಮಾಡಿದಾಗ ಚಾಮರಾಜಪೇಟೆ, ಮಹರಾಜಪೇಟೆ ಹಾಗೂ ಇಸ್ಲಾಂ ಪೇಟೆಯಲ್ಲಿ ಕಳ್ಳತನ ಮಾಡಿದ್ದ ಬಗ್ಗೆ ಹೇಳಿದ್ದಾರೆ.

ಬಸವರಾಜಪೇಟೆಯ ಬಸವರಾಜ್ ಎಂಬುವವರು ಕಳೆದ ಜೂನ್ 30ರಂದು ಮನೆಯೊಳಗಿನ ಮೊಬೈಲ್ ಕಳ್ಳತನವಾದ ಬಗ್ಗೆ ಬಸವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಪ್ರಕರಣದ ಬೆನ್ನತ್ತಿದ್ದ ಬಸವನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಜಿ.ನಾಗರಾಜ್ ಸಿಬ್ಬಂದಿಗಳಾದ ಫಕ್ರುದ್ದೀನ್ ಅಲಿ, ಸುರೇಶ್ ಟಿ, ಪವನಕುಮಾರ ಹಾಗೂ ಹನುಮಂತಪ್ಪ ಕುರುವತ್ತಿ, ಪೂರ್ವಾಚಾರಿ, ಜಿಲ್ಲಾ ಪೊಲೀಸ್ ಕಛೇರಿ ರಾಘವೇಂದ್ರ ಅವರುಗಳು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

# ಫೇಕ್‌ನ್ಯೂಸ್, ಡ್ರಗ್ಸ್‌ಗೆ ಕಡಿವಾಣ

**(1ನೇ ಪುಟದಿಂದ)** ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಾರೆ. ಬೀಟ್ ಸಂಚಾರ, ಹೈವೇ ಪ್ಯಾಟ್ರೋಲಿಂಗ್ ವ್ಯವಸ್ಥೆಯನ್ನು ತೀವ್ರ ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂದರು.

ಹುಬ್ಬಳ್ಳಿಯಲ್ಲಿ ಒಂದರ ಹಿಂದೆ ಮತ್ತೊಂದು ಕೊಲೆಗಳು ನಡೆದವು, ಗುಪ್ತಚರ ಪೊಲೀಸರು ಎಚ್ಚರದಿಂದ ಇದ್ದಿದ್ದರೆ ಎರಡನೇ ಕೊಲೆ ತಪ್ಪಿಸಬಹುದಿತ್ತು, ಹಿರಿಯ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕಾ ಯಿತು, ಇವರ ನಿರ್ಲಕ್ಷ್ಯದಿಂದ ಕೊಲೆ ಆಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವರ್ಗಾವಣೆಗೆ ಪ್ರಭಾವ ಬೀರುವ ಹಾಗೂ ಹಣ ಕೊಟ್ಟು ಟ್ರಾನ್ಸ್‌ಫರ್‌ಗೆ ಪ್ರಯತ್ನಿಸುವ ಅಧಿಕಾರಿಗಳ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು, ನಿಮಗೆ ಸಮಸ್ಯೆಗಳಿದ್ದರೆ ಗೃಹ ಸಚಿವರು ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ತಿಳಿಸಿ ಸರಿಪಡಿಸಿಕೊಳ್ಳಿ. ಕಾನೂನು ಮೀರಿ ಕೆಲಸ ಮಾಡಿ ಎಂದು ಸರ್ಕಾರ ಯಾವತ್ತೂ ಬಯಸಲ್ಲ, ಕಾನೂನು ಪ್ರಕಾರ ಕೆಲಸ ಮಾಡದಿದ್ದರೆ ಸರ್ಕಾರ ಸಹಿಸಲ್ಲ ಎಂದೂ ಅವರು ಹೇಳಿದರು.

ಜನರ ನಡುವೆ ಪೊಲೀಸರು, ಅಧಿಕಾರಿಗಳು ಸಮವಸ್ತ್ರದಲ್ಲಿ ಹೆಚ್ಚೆಚ್ಚು ಕಾಣಿಸಿಕೊಳ್ಳಬೇಕು. ಇದು ಜನ ಸಾಮಾನ್ಯರಿಗೆ ಧೈರ್ಯ ತಂದುಕೊಡುತ್ತದೆ.

ಪೊಲೀಸರು ಹೆಚ್ಚೆಚ್ಚು ಜನಸಂಪರ್ಕ ಸಭೆಗಳನ್ನು ಪರಿಣಾಮಕಾರಿಯಾಗಿ ನಡೆಸಬೇಕು. ಜನರಿಗೆ ಪೊಲೀಸ್ ಬಳಿ ಹೋದರೆ ನ್ಯಾಯ ಸಿಗುತ್ತದೆ ಎನ್ನುವ ಆತ್ಮವಿಶ್ವಾಸ ಹೆಚ್ಚಾಗಬೇಕು. ಶಾಂತಿ ಸಭೆಗಳನ್ನು ಚಾಚೂ ತಪ್ಪದೆ ಕಡ್ಡಾಯವಾಗಿ ನಿಯಮಿತವಾಗಿ ನಡೆಸಲೇಬೇಕು ಎಂದು ಸೂಚಿಸಿದರು.

ಫೇಕ್‌ನ್ಯೂಸ್ ವಿಪರೀತ ಹೆಚ್ಚುತ್ತಿವೆ, ಸಮಾಜದ ನೆಮ್ಮದಿಗೆ ಕಂಟಕವಾಗಿವೆ, ಇವುಗಳ ಪ್ರಸಾರ ತಡೆಗಟ್ಟಿ, ಇಲ್ಲವಾದರೆ ಕ್ರಮ ಎದುರಿಸಿ ಎಂದು ಪೊಲೀಸ್ ಅಧಿಕಾರಿಗಳನ್ನು ಇದೇ ಸಂದರ್ಭದಲ್ಲಿ ಎಚ್ಚರಿಸಿದರು.

ಫೇಕ್‌ನ್ಯೂಸ್‌ಗಳ ತಡೆಗೆ ಫ್ಯಾಕ್ಟ್‌ಚೆಕ್ ಘಟಕಗಳನ್ನು ಸ್ಥಾಪಿಸಲಾಗಿದೆ, ಆದರೂ ಫೇಕ್‌ನ್ಯೂಸ್‌ಗಳು ಹೆಚ್ಚಾಗುತ್ತಿವೆ, ಇದನ್ನು ಸಹಿಸಲು ಸಾಧ್ಯವಿಲ್ಲ. ಕೃತಕ ಬುದ್ಧಿಮತ್ತೆ ಬಳಸಿ, ಸ್ವಯಂ ಪ್ರೇರಿತ ದೂರುಗಳನ್ನು ಹೆಚ್ಚೆಚ್ಚು ದಾಖಲಿಸಿ, ಯಾವುದೇ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳಲೇಬೇಕು ಎಂದು ಹೇಳಿದರು.

ಪೊಲೀಸ್ ಮ್ಯಾನ್ಯುಯಲ್ ಪ್ರಕಾರ ಎಸ್‌ಪಿ, ಡಿಸಿಪಿ, ಐಜಿಗಳು ತಮ್ಮ ವ್ಯಾಪ್ತಿಯ ಪ್ರತಿ ಠಾಣೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸುವುದು ಕಡ್ಡಾಯ.

ಎಸ್‌ಪಿ ಮತ್ತು ಐಜಿಗಳು ತಮ್ಮ ವ್ಯಾಪ್ತಿಯ ಪ್ರತಿ ಠಾಣೆಗಳಿಗೆ ಹೋಗಿ ಪರಿಶೀಲಿಸಿದರೆ ಅಕ್ರಮ ಕ್ಲಬ್‌ಗಳು, ಇಸ್ಪೀಟ್, ಬೆಟ್ಟಿಂಗ್, ಮಾದಕ ದ್ರವ್ಯ ಮಾರಾಟ ತಡೆಗಟ್ಟಬಹುದು. ಇವುಗಳನ್ನು ನಿಲ್ಲಿಸದಿದ್ದರೆ ಎಸ್‌ಪಿ ಮತ್ತು ಐಜಿ ಮಟ್ಟದ ಅಧಿಕಾರಿಗಳನ್ನೂ ನೇರ ಹೊಣೆ ಮಾಡಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಸಿದರು.

ನಾಳೆಯಿಂದಲೇ ಎಸ್‌ಪಿ ಮತ್ತು ಐಜಿಗಳು ಠಾಣೆಗಳಿಗೆ ಭೇಟಿ ನೀಡಬೇಕು, ಅರ್ಧಗಂಟೆಯಲ್ಲಿ ಶಾಸ್ತ್ರ ಮುಗಿಸದೇ ಕೂಲಂಕುಶವಾಗಿ ಪರಿಶೀಲನೆ ನಡೆಸಬೇಕು. ತಪ್ಪುಗಳನ್ನು ಸರಿಮಾಡಿಕೊಂಡು ಗುಣಾತ್ಮಕ ಪೊಲೀಸ್ ವ್ಯವಸ್ಥೆ ಗಟ್ಟಿಗೊಳಿಸುವ ಮೂಲಕ ದೇಶದಲ್ಲಿ ಕರ್ನಾಟಕ ಪೊಲೀಸ್‌ಗೆ ಇರುವ ಉನ್ನತ ಹೆಸರನ್ನು ಉಳಿಸಿ, ಬೆಳೆಸಬೇಕು ಎಂದು ಹೇಳಿದರು.

ಕಳೆದ ಒಂದು ವರ್ಷದಲ್ಲಿ ರಾಜ್ಯದಲ್ಲಿ ಕೋಮುಗಲಭೆ ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಿದ್ದಕ್ಕೆ ಗೃಹ ಸಚಿವರಿಗೆ ಹಾಗೂ ಕರ್ನಾಟಕ ಪೊಲೀಸ್‌ಗೆ ಅಭಿನಂದನೆಗಳು ಎಂದರು.

# ಜು.23ರಂದು ಕೇಂದ್ರ ಬಜೆಟ್ ಮಂಡನೆ

ನವದೆಹಲಿ, ಜು. 6 - ಸಂಸತ್ತಿನ ಬಜೆಟ್ ಅಧಿವೇಶನ ಜುಲೈ 22 ರಿಂದ ಆಗಸ್ಟ್ 12 ರವರೆಗೆ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರು ಜುಲೈ 23ರಂದು ಬಜೆಟ್ ಮಂಡಿಸಲಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೂರನೇ ಅವಧಿಗೆ ಅಧಿಕಾರಕ್ಕೆ ಬಂದ ನಂತರ ಮಂಡಿಸಲಾಗುತ್ತಿರುವ ಮೊದಲ ಬಜೆಟ್ ಇದಾಗಿದೆ. ಈ ಬಜೆಟ್ ಹಲವಾರು ಐತಿಹಾಸಿಕ ಅಂಶಗಳನ್ನು ಹೊಂದಿರಲಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಉಭಯ ಸದನಗಳ ಜಂಟಿ ಅಧಿವೇಶನದಲ್ಲಿ ಮಾತನಾಡುವಾಗ ತಿಳಿಸಿದ್ದರು.


## Job Opportunities

VISHWAS

| Requirement | No. of Posts | Qualification | Desirabe Experience |
|---|---|---|---|
| Nursing Supervisor | 2 | B.Sc (N), M.Sc (N) | More than 15 years Experience in Hospital |
| NICU Staff Nurse | 5 | GNM or B.Sc (N) | 2-5 years Experience |
| ICU Staff Nurse | 4 | GNM or B.Sc (N) | 3-8 years Experience |
| Labour room OT Nursing Staff / OT Technicians | 3 | GNM or B.Sc (N) | 2-5 Years Experience in Pre and Post Labour Activities |

**Apply Now**

8th, 9th, 10th july 2024 Timings : 11 AM to 2 PM and 6 AM to PM

**Vishwas life care Hospital**
#298, vidyarthi Bhavan circle, hadadi road, Davanagere.
75800 75866

Candidates should bring their Brief CV, one passport size photograph, Educated Certificates, Experience Certificates for Interview, Attractive Salary will be offered for most deserving Candidates.



## ಶಿಕ್ಷಕರು ಬೇಕಾಗಿದ್ದಾರೆ

**ಭುವನೇಶ್ವರಿ ಆದರ್ಶ ಹಿರಿಯ ಪ್ರಾಥಮಿಕ ಶಾಲೆ**
ಕೋಡಿಯಾಲ, ರಾಣೇಬೆನ್ನೂರು ತಾಲ್ಲೂಕು, ಕುಮಾರಪಟ್ಟಣಂ (ಪೋ)
1 ರಿಂದ 7ನೇ ತರಗತಿಗೆ ಆಂಗ್ಲ ಭಾಷಾ ವಿಷಯ ಬೋಧಿಸಲು ಶಿಕ್ಷಕರು ಬೇಕಾಗಿದ್ದಾರೆ
ವಿದ್ಯಾರ್ಹತೆ - ಪಿ.ಯು.ಸಿ ಡಿಎಡ್, ಬಿ.ಎ. ಬಿಎಡ್
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ - 10-07-2024
ಮುಖ್ಯೋಪಾಧ್ಯಾಯರು - 98444 87901



## TO LET (RENT)

**Brand New Commercial Complex**
Location : # 644, Sri Durga Krupa,
60 feet Road, Nittuvalli,
DAVANGERE-577 004.

* Total Area - 20,000 sqft
* Basement - 3900 sqft,
* Ground Floor - 3900 sqft
* First floor - 3900 sqft
* Second floor - 3900 sqft
* Third floor - 3900 sqft

**Amenity :**
1) Elevator (lift) 2) Backup Power

Contact : 9036302031, 9036612091

# ದಾನ - ಧರ್ಮ ಮತ್ತು ನಾಯಕತ್ವದ ಗುಣ ಬೆಳೆಸುವ ಲಯನ್ಸ್ ಸೇವೆಗೆ ಎಸ್ಸೆಸ್ ಶ್ಲಾಘನೆ



**ಲಯನ್ಸ್ ಅಧ್ಯಕ್ಷರಾಗಿ ಕೈಗಾರಿಕೋದ್ಯಮಿ ಎಸ್.ಜಿ. ಉಳವಯ್ಯ**

ದಾವಣಗೆರೆ,ಜು.6- ಸಮಾಜ ಸೇವೆಯೇ ಉಸಿರನ್ನಾಗಿಸಿಕೊಂಡಿರುವ ಲಯನ್ಸ್ ಕ್ಲಬ್ಬಿನ ಸೇವೆ ಮಾದರಿ ಎಂದು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಮಕ್ತ ಕಂಠದಿಂದ ಪ್ರಶಂಸಿಸಿದರು. ನಗರದ ಕೈಗಾರಿಕೋದ್ಯಮಿ ಎಸ್.ಜಿ. ಉಳುವಯ್ಯ ಅವರು ದಾವಣಗೆರೆ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಅವರ ಸೇವಾ ದೀಕ್ಷಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಲಯನ್ಸ್ ಸದಸ್ಯರು ಸ್ವತಃ ತಾವಲ್ಲದೇ, ಉಳ್ಳವರಿಂದಲೂ ದಾನ ಪಡೆದು ಬಡ ಜನರಿಗೆ ಸಹಾಯ ಮಾಡುವುದರ ಮೂಲಕ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯ ಎಂದರು.

ಬಡ ಜನರ ಮತ್ತು ಸಮಾಜದ ಅಗತ್ಯ ಸೇವೆಯನ್ನು ಮಾಡುವುದರೊಂದಿಗೆ ತಾವೂ ಕೂಡಾ ಪದಾಧಿಕಾರಿಗಳಾಗುವುದರ ಮೂಲಕ ದಾನ - ಧರ್ಮದ ಮತ್ತು ನಾಯಕತ್ವದ ಗುಣವನ್ನು ಬೆಳೆಸುವ ಲಯನ್ಸ್ ಕ್ಲಬ್ಬಿನ ಧ್ಯೇಯವನ್ನು ಎಸ್ಸೆಸ್ ಮೆಚ್ಚುಗೆ ವ್ಯಕ್ತಪಡಿಸಿದರು.

ಲಯನ್ಸ್ ಮತ್ತು ರೋಟರಿ ಸಂಸ್ಥೆಗಳು ಹೊರ ದೇಶದಿಂದ ಬಂದಿರುವ ಸಂಸ್ಥೆಗಳಾಗಿದ್ದು, ಪ್ರತಿಷ್ಠಿತ ಕ್ಲಬ್ಬುಗಳಾಗಿವೆ. ಈ ಸಂಸ್ಥೆಗಳ ಉದ್ದೇಶವನ್ನು ಗುರಿಯನ್ನಾಗಿಸಿಕೊಂಡು ಆ ನಿಟ್ಟಿನಲ್ಲಿ ಸಾಗಿರುವ ಸದಸ್ಯರ ಕಾರ್ಯ ಚಟುವಟಿಕೆಗಳನ್ನು ಅವರು ಕೊಂಡಾಡಿದರು.

ಜಿಲ್ಲಾ ಲಯನ್ಸ್ ಮಾಜಿ ರಾಜ್ಯಪಾಲ ವಿ.ಜಿ. ಶೆಟ್ಟಿ ಅವರು ಎಸ್.ಜಿ. ಉಳುವಯ್ಯ ಮತ್ತು ಅವರ ತಂಡವನ್ನು ಪ್ರತಿಷ್ಠಾಪಿಸಿದರು. ಜಿಲ್ಲಾ ಲಯನ್ಸ್ (2ನೇ ಪುಟಕ್ಕೆ)

# ಜನತಾ ದರ್ಶನದಿಂದ ಜಿಲ್ಲೆಯಲ್ಲಿ ಅಭಿವೃದ್ಧಿ ಪರ್ವ

## ನೂತನ ಸಂಸದರು ಮತ್ತು ಶಾಸಕರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಪ್ರಭಾ ಮಲ್ಲಿಕಾರ್ಜುನ್



ದಾವಣಗೆರೆ, ಜು.6- ಪಕ್ಷದ ಶಾಸಕರು, ಮುಖಂಡರ ಸಮ್ಮುಖದಲ್ಲಿ ಕ್ಷೇತ್ರದ ಎಲ್ಲ ತಾಲ್ಲೂಕಿನಲ್ಲಿ ಪ್ರತಿ ತಿಂಗಳು ಜನತಾ ದರ್ಶನ ಏರ್ಪಡಿಸುವ ಮೂಲಕ ಅಭಿವೃದ್ಧಿಯ ಪರ್ವ ಮಾಡೋಣ ಎಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಡಿ.ಟಿ. ಶ್ರೀನಿವಾಸ್ ಅಭಿಮಾನಿ ಬಳಗದ ವತಿಯಿಂದ ನಗರದ ಬಿಐಇಟಿ ಕಾಲೇಜಿನ ಎಸ್.ಎಸ್. ಮಲ್ಲಿಕಾರ್ಜುನ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ನೂತನ ಸಂಸದರು ಮತ್ತು ಶಾಸಕರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನ ಜನರ ಅನುಕೂಲಕ್ಕಾಗಿ ದಿನದ 24 ಗಂಟೆ ಕಾರ್ಯನಿರ್ವಹಿಸುವ ಕಾಲ್ ಸೆಂಟರ್ ತೆರೆಯುವ ಯೋಜನೆ ಬಗ್ಗೆ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಶಾಸಕರಾದ ಮಾವನವರ ಜೊತೆ ಚರ್ಚಿಸಿದ್ದೇವೆ ಎಂದು ತಿಳಿಸಿದರು.

ನಾನು ನೂತನ ಸಂಸದರಾದ ಕಾರಣ ಎಲ್ಲಾ ಇಲಾಖೆಯ ಕಾರ್ಯವೈಖರಿ ಬಗ್ಗೆ ವೇಗದ ಕಲಿಕೆಯಲ್ಲಿ ತೊಡಗಿದ್ದು, ಸರ್ಕಾರಿ ಕೆಲಸಗಳಲ್ಲಿ ಪಾರದರ್ಶಕತೆ ಬರಬೇಕಿದೆ ಎಂದರು.

ಬೋಧನಾ ಸಿಬ್ಬಂದಿಯ ಬೇಡಿಕೆಗಳಾದ ಒಪಿಎಸ್, ಅತಿಥಿ ಉಪನ್ಯಾಸಕರ ಸಮಸ್ಯೆ ಮತ್ತು ದಾವಣಗೆರೆ ವಿವಿಯ ಶೈಕ್ಷಣಿಕ ಕ್ಯಾಲೆಂಡರ್ ಪರಿಷ್ಕರಣೆ ಬಗ್ಗೆ ಮೇಲಧಿಕಾರಿಗಳ ಗಮನಕ್ಕೆ ತರುವ ಮನವಿಗೆ ಶ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು.

ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ಸಮಾಜದಲ್ಲಿ ಬೆರೆತ ಹಾಗೂ ಜನರ ಕಷ್ಟಕ್ಕೆ ಸ್ಪಂದಿಸುವ ನಾಯಕನಿಗೆ ಯಾವತ್ತೂ ಸೋಲಿಲ್ಲ. ಈ ನಿಟ್ಟಿನಲ್ಲಿ ಶಿಕ್ಷಕರ ಬೇಡಿಕೆ ಈಡೇರಿಸುವಲ್ಲಿ ಡಿ.ಟಿ. ಶ್ರೀನಿವಾಸ್ ಪ್ರಾಮಾಣಿಕವಾಗಿ ಶ್ರಮಿಸಲಿದ್ದಾರೆ ಎಂದು ಹೇಳಿದರು.

ಸರ್ಕಾರವು 6ನೇ ಗ್ಯಾರಂಟಿಯಾಗಿ ಒಪಿಎಸ್ ನೀಡಲಿದೆ. ನಾನೂ ಸಹ ಈ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

> **ಶಿಕ್ಷಕರು ಪ್ರಜ್ಞಾವಂತರು. ಆದ್ದರಿಂದ ದುಬಾರಿ ಚುನಾವಣೆಗೆ ಕಡಿವಾಣ ಹಾಕಿ ವ್ಯಕ್ತಿತ್ವಕ್ಕೆ ಬೆಲೆ ಕೊಡುವ ಚುನಾವಣೆಗೆ ಮಹತ್ವ ನೀಡುವ ಜತೆಗೆ ಶಿಕ್ಷಕರು ಸರ್ಕಾರಿ ಶಾಲೆಯ ಉಳಿವಿಗಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಬೇಕಿದೆ.**
> **- ಕೆ.ಎಸ್. ಬಸವಂತಪ್ಪ, ಶಾಸಕ**

ಮಾಯಕೊಂಡ ಕ್ಷೇತ್ರದಲ್ಲಿ ಸರ್ಕಾರಿ ಶಾಲೆಗಳಿಗೆ ಕೊಠಡಿ ಕೊರತೆಯಿದೆ. ಆದ್ದರಿಂದ ಶಾಲೆಗಳ ಅಭಿವೃದ್ಧಿಗಾಗಿ ಹೆಚ್ಚಿನ ಅನು ದಾನ ಒದಗಿಸಿ ಎಂದು ಸಂಸದರ ಬಳಿ ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಜಗಳೂರಿನ ಶಾಸಕ ದೇವೇಂದ್ರಪ್ಪ, ಬಿಐಇಟಿ ಕಾಲೇಜಿನ ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಕಾಲೇಜಿನ ಪ್ರಾಚಾರ್ಯ ಡಾ. ಎಚ್.ಬಿ. ಅರವಿಂದ್, ಸಿ.ಹೆಚ್. ಮುರಿಗೇಂದ್ರಪ್ಪ, ದಿನೇಶ್ ಕೆ. ಶೆಟ್ಟಿ, ಹನುಮಂತಪ್ಪ, ಡಿಡಿಪಿಐ ಕೊಟ್ರೇಶ್, ಬಿಇಒ ಡಾ. ಪುಷ್ಪಲತಾ, ಪೂರ್ಣಿಮಾ ಶ್ರೀನಿವಾಸ್, ಪ್ರದೀಪ್ ಮತ್ತಿತರರಿದ್ದರು.

# ಬಿಐಇಟಿಯ ನಾಲ್ಕು ವಿಭಾಗಗಳಿಗೆ ಮಾನ್ಯತೆ ಮುಂದುವರಿಕೆ

ದಾವಣಗೆರೆ, ಜು.6- ರಾಷ್ಟ್ರೀಯ ಮಾನ್ಯತಾ ಮಂಡಳಿ ನವದೆಹಲಿಯಿಂದ ಬಿಐಇಟಿ ಕಾಲೇಜಿನ ಸಿವಿಲ್ ಇಂಜಿನಿಯರಿಂಗ್, ಮೆಕ್ಯಾನಿಕಲ್, ಕಂಪ್ಯೂಟರ್ ಸೈನ್ಸ್ ಮತ್ತು ಇಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್ ಇಂಜಿನಿಯರಿಂಗ್ ವಿಭಾಗಗಳಿಗೆ ಶೈಕ್ಷಣಿಕ ವರ್ಷ 2024-25 ರಿಂದ 2026-27 ರವರೆಗೆ ಮೂರು ವರ್ಷಗಳ ಅವಧಿಗೆ ಮಾನ್ಯತೆಯನ್ನು ಮುಂದುವರೆಸಿ ಆದೇಶ ನೀಡಿದೆ.

ಮಾನ್ಯತೆಯನ್ನು ಮುಂದುವರೆಸಲು ಕೋರಿ ರಾಷ್ಟ್ರೀಯ ಮಾನ್ಯತಾ ಮಂಡಳಿಗೆ ಬಿಐಇಟಿ ಕಾಲೇಜು ಎನ್.ಬಿ.ಎ ಮಾನದಂಡಗಳ ಪಾಲನಾ ವರದಿಯನ್ನು ರಾಷ್ಟ್ರೀಯ ಮಾನ್ಯತಾ ಮಂಡಳಿ ತಜ್ಞರ ತಂಡ ಬಿಐಇಟಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ರಾಷ್ಟ್ರೀಯ ಮಾನ್ಯತಾ ಮಂಡಳಿಗೆ ವರದಿ ಸಲ್ಲಿಸಿತ್ತು. ಮಾನ್ಯತೆ ಮುಂದುವರೆಸಿ ಆದೇಶಿಸಿರುವುದಾಗಿ ಪ್ರಾಂಶುಪಾಲ ಡಾ. ಹೆಚ್.ಬಿ. ಅರವಿಂದ್ ಮತ್ತು ನಿರ್ದೇಶಕ ಪ್ರೊ.ವೈ. ವೃಷಭೇಂದ್ರಪ್ಪ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ



ವಿದ್ಯಾನಗರದ ದೃಶ್ಯ ಕಲಾ ಮಹಾವಿದ್ಯಾಲಯದ ಬಯಲು ರಂಗ ಮಂದಿರದಲ್ಲಿ ಉಡುಪಿ ಜಿಲ್ಲೆಯ ಮಂದಾರ್ತಿಯ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿಯ ಯಕ್ಷಗಾನ ಕಲಾವಿದರಿಂದ ಇಂದು ಸಂಜೆ 7 ಗಂಟೆಗೆ 'ಮಹಾಶಕ್ತಿ ವೀರಭದ್ರ' ಪ್ರಸಂಗ ನಡೆಯಲಿದೆ.

ಸವಿಡೈನ್ ಮಹೇಶ್ ಶೆಟ್ಟಿ ಗೆಳೆಯರ ಬಳಗ ಮತ್ತು ಕರಾವಳಿ ಮಿತ್ರ ಮಂಡಳಿಯ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ ಈ ಯಕ್ಷಗಾನ ವೀಕ್ಷಿಸಲು ಉಚಿತ ಪ್ರವೇಶವಿದೆ ಎಂದು ಸಾಲಿಗ್ರಾಮ ಗಣೇಶ್‌ಶೆಣೈ ತಿಳಿಸಿದ್ದಾರೆ.

# ಕಾಶ್ಮೀರ : ಕಾರ್ಯಾಚರಣೆಯಲ್ಲಿ 4 ಉಗ್ರರು ಹತ : ಓರ್ವ ಸೈನಿಕ ಹುತಾತ್ಮ

ಶ್ರೀನಗರ, ಜು. 7 - ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಸಲಾದ ಎರಡು ಕಾರ್ಯಾಚರಣೆಗಳಲ್ಲಿ ನಾಲ್ವರು ಉಗ್ರರು ಹತರಾಗಿದ್ದಾರೆ. ಕಾರ್ಯಾಚರಣೆಯಲ್ಲಿ ಸೈನಿಕರೊಬ್ಬರು ಹುತಾತ್ಮರಾಗಿದ್ದಾರೆ.

ಕುಲ್ಗಾಂನ ಫ್ರಿಸಲ್ ಚಿನ್ನಿಗಮ್ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ಇದುವರೆಗೂ ನಡೆಸಲಾದ ಗುಂಡಿನ ಚಕಮಕಿಯಲ್ಲಿ ನಾಲ್ವರು ಉಗ್ರರು ಹತರಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗುಂಡಿನ ಚಕಮಕಿ ಇನ್ನೂ ಮುಂದುವರಿದಿರುವ ಕಾರಣ ಮೃತ ದೇಹಗಳನ್ನು ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದಕ್ಕೂ ಮುಂಚೆ ದಕ್ಷಿಣ ಕಾಶ್ಮೀರ ಜಿಲ್ಲೆಯ ಮೊಡೆರ್ಗಾಮ್ ಹಳ್ಳಿಯಲ್ಲಿ ಗುಂಡಿನ ಚಕಮಕಿ ನಡೆದಿತ್ತು. ಭದ್ರತಾ ಪಡೆಗಳು ಇಡೀ ಪ್ರದೇಶವನ್ನು ಸುತ್ತುವರಿದಿವೆ. ಈ ಕಾರ್ಯಾಚರಣೆಯಲ್ಲಿ ಸೈನಿಕರೊಬ್ಬರಿಗೆ ತೀವ್ರ ಗಾಯಗಳಾಗಿ ಅವರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಕರ್ನಾಟಕ ಸಂಭ್ರಮ : ನಗರದಲ್ಲಿ ರಥಯಾತ್ರೆಗೆ ಸ್ವಾಗತ



ದಾವಣಗೆರೆ, ಜು. 6- ಕರ್ನಾಟಕ ಸಂಭ್ರಮ 50 ರ ಅಂಗವಾಗಿ ರಾಜ್ಯದೆಲ್ಲೆಡೆ ಸಂಚರಿಸುತ್ತಿರುವ ಜ್ಯೋತಿ ರಥಯಾತ್ರೆಯು ಇಂದು ನಗರಕ್ಕೆ ಆಗಮಿಸಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್ ಅವರು ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಹೂವಿನ ಹಾರ ಹಾಕುವುದರ ಮೂಲಕ ಸ್ವಾಗತಿಸಿದರು.

ನಂತರ ನಡೆದ ಜ್ಯೋತಿ ರಥಯಾತ್ರೆ ಮೆರವಣಿಗೆಯು ಡೊಳ್ಳು ಕುಣಿತ, ಗೊಂಬೆ ಕುಣಿತ, ವಿವಿಧ ಶಾಲಾ ಮಕ್ಕಳ ಡ್ರಮ್ ಸೆಟ್ ವಾದ್ಯಗಳೊಂದಿಗೆ ರಾಜಬೀದಿಗಳಲ್ಲಿ ಸಂಚರಿಸಿದ ನಂತರ ಬೀಳ್ಕೊಡಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಕಾರಿ ಸುರೇಶ್ ಬಿ. ಇಟ್ನಾಳ್, ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ರವಿಚಂದ್ರ ಮತ್ತಿತರರು ರಥಯಾತ್ರೆಯನ್ನು ಸ್ವಾಗತಿಸಿದರು.


LOAN / ಲೋನ್

First time in Davangere

ದಾವಣಗೆರೆಯಲ್ಲಿ ಪ್ರಪ್ರಥಮ ಬಾರಿಗೆ

ನೀವು ಮನೆಯಲ್ಲೇ ಕುಳಿತು ಯಾವುದೇ ಸರ್ಕಾರಿ / ಪ್ರೈವೇಟ್ ಬ್ಯಾಂಕಿನಲ್ಲಿ ಸೈಟ್ ಗೆ, ಮನೆ ಕಟ್ಟಲು, ಮನೆ ಖರೀದಿಸಲು, ಎಜುಕೇಷನ್‌ಗೆ ಮತ್ತು ಆಸ್ತಿ ಮೇಲೆ ಲೋನ್ ಅನ್ನು ಪಡೆಯಲು ಬೇಕಾಗುವ Legal ಮತ್ತು Valuvation ಅನ್ನು ಉಚಿತವಾಗಿ ಮಾಡಿಸಿ ಲೋನ್ ಮಾಡಿ ಕೊಡಲಾಗುವುದು

Buidling Licence, Property Registration, Khatha Change and Eswathu ಗಾಗಿಯೂ ಸಹ ನಮ್ಮನ್ನು ಸಂಪರ್ಕಿಸಿ :

Property Hub

# 831, 6th Cross, Nijalingappa Badavane, Davangere-4

96118 66449

*Conditions apply



ಆತ್ಮೀಯ ಆಹ್ವಾನ

ಇಂದಿನಿಂದ ಶುಭಾರಂಭವಾಗುತ್ತಿರುವ

ಆಹಾರ್ Cakes & Cafe

ಶಾರದಾಂಭ ದೇವಸ್ಥಾನದ ಎದುರು, ರಿಂಗ್ ರಸ್ತೆ, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-4

ಪ್ರಾರಂಭದ ಆಕರ್ಷಣೆ

ಉಚಿತ*

200 ಗ್ರಾಂ ನಮ್‌ಕಿನ್ ಅಥವಾ 150 ಗ್ರಾಂ ಕುಕ್ಕೀಸ್

ರೂ. 500 ಮೊತ್ತದ ಖರೀದಿಗೆ*

ಸ್ವಾಗತಿಸುವವರು: ಆಹಾರ್ 2000 ಬಳಗ



**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ದಾವಣಗೆರೆ ಕಸಬಾ ಹೋಬಳಿ ಹಳೇಬಾತಿ ರಿ.ಸರ್ವೆ ನಂ. 30/5, 30/6, 30/8, 30/9, 30/10, 30/15, 30/13 ರಲ್ಲಿ ಬರತಕ್ಕ ಸೈಟ್ ನಂ. 114, 115, 116, 135 ಈ ಸೈಟ್‌ಗಳನ್ನು ದಿನಾಂಕ 18.06.2022ರಂದು ಮೂಲ ಮಾಲೀಕರಾದ ಶ್ರೀ ಬಿ.ಎಸ್. ಜಗದೀಶ್ ಬಿನ್ ಬಿ.ಎಸ್. ಬಸಪ್ಪ, ಶ್ರೀ ಎಸ್.ಬಿ. ಮಲ್ಲಿಕಾರ್ಜುನ ಬಿನ್ ಬಿ.ಎಸ್. ಬಸಪ್ಪ ಮತ್ತು ಶ್ರೀಮತಿ ಲಲಿತಾ ಯು. ಕೋ. ಬಿ.ಎಸ್. ಜಗದೀಶ್ ಇವರುಗಳು ಖಾಲಿ ನಿವೇಶನದ ಕ್ರಯದ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ. ಮತ್ತು ಅವರುಗಳ ಎಸ್.ಬಿ. ಖಾತೆ (SB A/c)ಗಳಿಗೆ ಹಣ ದಿನಾಂಕ 18.06.2022ರಂದು ಸಂದಾಯವಾಗಿರುತ್ತದೆ. ಮೇಲೆ ತಿಳಿಸಿರುವ ರಿ. ಸರ್ವೆ ನಂ. 30/8ರಲ್ಲಿ ಬರತಕ್ಕ ಕೆ.ಹೆಚ್.ಬಿ. ಕುಂದುವಾಡ ಮತ್ತು ಜಡ್ಜ್ ಕ್ವಾರ್ಟ್ರಸ್ ಹಿಂಭಾಗದ ಸೈಟ್‌ಗಳ ಸಂಖ್ಯೆ 114, 115, 116, 135 ಸಾರ್ವಜನಿಕರು ಯಾರು ಈ ಸ್ವತ್ತಿನ ಸೈಟುಗಳನ್ನು ಯಾವುದೇ ರೀತಿಯ ವ್ಯವಹಾರ ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/- ಶ್ರೀ ಪ್ರಶಾಂತ್ ಕೆ.ಎಸ್., ಶ್ರೀ ಅನಿಲ್ ಕೆ.ಎಸ್.,
ಶ್ರೀ ಮಲ್ಲಿಕಾರ್ಜುನ ಕೆ.ಎಸ್., ಶ್ರೀ ಮಂಜುನಾಥ ಕೆ.ಎಸ್.
90361 89699, 95388 82865



**10ನೇ ವರ್ಷದ ಚಿರಸ್ಮರಣೆ**



ದಿ|| ಆಲೂರು ಕುಬೇಂದ್ರಪ್ಪನವರು

ಜನನ : 28-06-1956 ಮರಣ : 07-07-2013

ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ. ಸದಾ ನಿಮ್ಮ ಸ್ಮರಣೆ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

ದುಃಖತಪ್ತ ಕುಟುಂಬ ವರ್ಗ

ಶ್ರೀಮತಿ ಪುಷ್ಪ ಆಲೂರು

ಮಕ್ಕಳಾದ : ✦ ಅಮಿತ್ ಆಲೂರು ✦ ಅಜಿತ್ ಆಲೂರು ✦ ಮಲ್ಲಿಕಾರ್ಜುನ್ ಆಲೂರು







KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas